# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಸುಲು
EDITOR : S VENKATESULU

ANANTHA JANA SAKTHI KANNADA DAILY ಕನ್ನಡ ದಿನಪತ್ರಿಕೆ


ಸಂಪುಟ : 01 ಸಂಚಿಕೆ : 32 ರಿ.ನಂ : ಕೆಎನ್‌ಎಎನ್ / 26 / ಎ5487 ಬಳ್ಳಾರಿ ಸೋಮವಾರ ದಿನಾಂಕ : 10-08-2026 ಪುಟ : 04 ಬೆಲೆ : 2-00


## ಸಂಸತ್ ಅಧಿವೇಶನ: ಗದ್ದಲದಲ್ಲಿ ವ್ಯರ್ಥ,

## ಅರ್ಥಪೂರ್ಣ ಚರ್ಚೆಯೇ ಇಲ್ಲ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಮುಕ್ತಾಯಗೊಳ್ಳಲು ಇನ್ನೂ ಕೇವಲ ನಾಲ್ಕು ದಿನಗಳು ಬಾಕಿ ಉಳಿದಿರುವ ಬೆನ್ನಲ್ಲೇ, ಕಳೆದ 15 ದಿನಗಳ ಕಲಾಪದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸದಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ. ಆಡಳಿತಾರೂಢ ಸರ್ಕಾರ ಹಾಗೂ ವಿರೋಧ ಪಕ್ಷಗಳ ನಡುವಿನ ಸಂಘರ್ಷದಿಂದಾಗಿ ಸಂಸತ್ತಿನ ಅಮೂಲ್ಯ ಕಲಾಪದ ಸಮಯ ಗದ್ದಲ, ಪ್ರತಿಭಟನೆ ಮತ್ತು ಘೋಷಣೆಗಳಿಗೆ ಸೀಮಿತವಾಗಿದ್ದು, ಪ್ರಮುಖ ಜನಪರ ಹಾಗೂ ರಾಷ್ಟ್ರೀಯ ವಿಷಯಗಳ ಕುರಿತು ಸಮಗ್ರ ಚರ್ಚೆ ನಡೆಯದಂತಾಗಿದೆ.

ಸಂಸತ್ತಿನ ಮುಂಗಾರು ಅಧಿವೇಶನ ಆರಂಭದಿಂದಲೂ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿವೆ. ವಿಶೇಷವಾಗಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ನಡೆದಿರುವ ಪೊಲೀಸ್ ಕ್ರಮದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ಸ್ಪಷ್ಟನೆ ನೀಡಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.



**ರಾಜ್ಯಸಭೆಯಲ್ಲೂ ಇದೇ ಪರಿಸ್ಥಿತಿ**

**ಮೇಲ್ಮನೆಯಾದ ರಾಜ್ಯಸಭೆಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಕಳೆದ 15 ಕಲಾಪಗಳಲ್ಲಿ ರಾಜ್ಯಸಭೆ ಒಟ್ಟು 24 ಗಂಟೆ 21 ನಿಮಿಷ ಕಾರ್ಯನಿರ್ವಹಿಸಿದೆ. ಈ ಅವಧಿಯಲ್ಲಿ ಆರು ಮಸೂದೆಗಳನ್ನು ಅಂಗೀಕರಿಸಲಾಗಿದೆ.**

## ಮೋದಿ ಗುಂಡಿಕ್ಕಿದರೂ ವಂದೇ ಮಾತರಂ ಪೂರ್ಣ ಹಾಡಲ್ಲ: ಕಾಂಗ್ರೆಸ್ ಸಂಸದ

ತಿರುವನಂತಪುರ: ಕೇರಳಂನಲ್ಲಿ 'ವಂದೇ ಮಾತರಂ'ನ ಪೂರ್ಣ ಆವೃತ್ತಿಯನ್ನು ಈ ಜನ್ಮದಲ್ಲಿ ಎಂದೂ ಹಾಡುವುದಿಲ್ಲ ಎಂದು ಕಾಂಗ್ರೆಸ್ ಸಂಸದ ರಾಜ್‌ಮೋಹನ್ ಉನ್ನಿತನ್ ಭಾನುವಾರ ಹೇಳಿದ್ದಾರೆ.

ರಾಷ್ಟ್ರೀಯ ಗೀತೆಯನ್ನು ಪೂರ್ಣವಾಗಿ ಹಾಡುವ ಕುರಿತು ಮುಖ್ಯ ಕಾರ್ಯದರ್ಶಿಯಿಂದ ಯಾವುದೇ ನಿರ್ದೇಶನ ಬಂದಿರುವ ಬಗ್ಗೆ ತಮಗೆ ತಿಳಿದಿಲ್ಲ. ಆದರೂ, ನರೇಂದ್ರ ಮೋದಿ ನಮ್ಮನ್ನು ಗುಂಡಿಕ್ಕಿ ಕೊಲ್ಲುವುದಾಗಿ ಬೆದರಿಕೆ ಹಾಕಿದರೂ ಪೂರ್ಣವಾಗಿ ಹಾಡುವುದಿಲ್ಲ ಎಂದು ಉನ್ನಿತನ್ ಹೇಳಿದ್ದಾರೆ.

'ಈವರೆಗೆ ವಂದೇ ಮಾತರಂ ಅನ್ನು ಹೇಗೆ ಹಾಡಲಾಗುತ್ತಿದೆಯೋ ಮುಂದೆಯೂ ಹಾಗೆಯೇ ಹಾಡಲಾಗುತ್ತದೆ. ಅದಕ್ಕಿಂತ ಹೆಚ್ಚೇನನ್ನೂ ಹಾಡುವುದಿಲ್ಲ' ಎಂದು ಅವರು ದೃಢವಾಗಿ ಹೇಳಿದ್ದಾರೆ.

'ರಾಜ್ಯಗಳ ಲೋಕ ಭವನಗಳು ಕೀಳುಮಟ್ಟದ ರಾಜಕೀಯದ ಕೇಂದ್ರಗಳಾಗಿವೆ. ರಾಜ್ಯಪಾಲರು ಈಗ ಹಣದ ಬಲದಿಂದ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಕೆಲಸ ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ರಾಜ್ಯಪಾಲರಿಂದ ಯಾವ ನ್ಯಾಯವನ್ನು ನಿರೀಕ್ಷಿಸಬಹುದು? ಅವರೆಲ್ಲರೂ ಕೇಂದ್ರ ಸರ್ಕಾರದ ಭಟ್ಟಂಗಿಗಳಾಗಿ ಬದಲಾಗಿ

'ಈ ಜನ್ಮದಲ್ಲಂತೂ ನಾವು ವಂದೇ ಮಾತರಂ'ನ ಸಂಪೂರ್ಣ ಗಾಯನವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ',ಎಂದಿದ್ದಾರೆ




ಪ್ರಿಯ ಓದುಗರೇ, ಎಲ್ಲರೂ ನಮ್ಮ
**ಅನಂತ ಜನಶಕ್ತಿ**
ಕನ್ನಡ ದಿನ ಪತ್ರಿಕೆಯನ್ನು ತಪ್ಪದೇ ಓದಿರಿ


## 'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ಪಾಲ್ಗೊಳ್ಳಿ: ಪ್ರಧಾನಿ ಮೋದಿ ಕರೆ



ನವದೆಹಲಿ: 'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ನಾಗರಿಕರು ಉತ್ಸಾಹದಿಂದ ಪಾಲ್ಗೊಳ್ಳುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ(ಆ.9) ಮನವಿ ಮಾಡಿದ್ದಾರೆ.

2022ರಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ'ದ ಅಡಿಯಲ್ಲಿ ಪ್ರಾರಂಭವಾದ 'ಹರ್ ಘರ್ ತಿರಂಗಾ' ಅಭಿಯಾನವು ನಂತರದ ವರ್ಷಗಳ ಸ್ವಾತಂತ್ರ್ಯ ದಿನಾಚರಣೆಯಂದು ಮುಂದುವರೆದಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, 'ತ್ರಿವರ್ಣ ಧ್ವಜವು ನಮ್ಮ ಹೆಮ್ಮೆ. ದೇಶಕ್ಕಾಗಿ ಕೊಡುಗೆ ನೀಡಲು ಇದು ನಿರಂತರ ಪ್ರೇರಣೆಯಾಗಿದೆ. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆಯಂದು 'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳೋಣ. ವಿಕಸಿತ ಭಾರತ ನಿರ್ಮಾಣಕ್ಕೆ ಕೊಡುಗೆ ನೀಡುವ ನಮ್ಮ ಸಾಮೂಹಿಕ ಸಂಕಲ್ಪವನ್ನು ಪುನರುಜ್ಜೀವನಗೊಳಿಸೋಣ' ಎಂದಿದ್ದಾರೆ.

2026ರ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಆಗಸ್ಟ್ 6ರಂದು ಚಾಲನೆ ನೀಡಲಾಗಿದ್ದು, ಆಗಸ್ಟ್ 9ರಿಂದ 17ರವರೆಗೆ ದೇಶದಾದ್ಯಂತ ಆಚರಿಸಲಾಗುತ್ತದೆ.

## ಬಿಡದಿ ಟೌನ್‌ಶಿಪ್; ಸತ್ಯ ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ: ಡಿಕೆಶಿ



ಬೆಂಗಳೂರು : 'ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಸತ್ಯವನ್ನು ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ. ಅಧಿವೇಶನದಲ್ಲಿ ಬಂದು ಚರ್ಚೆ ಮಾಡಲಿ' ಎಂದು ವಿರೋಧ ಪಕ್ಷದ ನಾಯಕರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಕೆಪಿಸಿಸಿ ಭಾರತ ಜೋಡೋ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಭಾನುವಾರ ಪ್ರತಿಕ್ರಿಯೆ ನೀಡಿದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಹಾಗೂ ಬಿಜೆಪಿ ಪಾದಯಾತ್ರೆ ವಿಚಾರವಾಗಿ ಕೇಳಿದಾಗ, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರತಿಭಟನೆ, ಪಾದಯಾತ್ರೆ ಮಾಡುವ ಹಕ್ಕಿದೆ. ಅವರು ಏನು ಬೇಕಾದರೂ ಮಾಡಲಿ' ಎಂದರು.

'ಅವರು ಅಧಿವೇಶನದಲ್ಲಿ ಬಂದು ಮಾತನಾಡಲಿ. ಎಲ್ಲೆಲ್ಲಿ ದೂರು ನೀಡುತ್ತಾರೋ ನೀಡಲಿ, ನಾವು ಯಾರಿಗೂ ಬಲವಂತ ಮಾಡುತ್ತಿಲ್ಲ. ಯಾವ ಸಂದರ್ಭದಲ್ಲಿ ಯಾವ ಉತ್ತರ ಕೊಡಬೇಕೋ ಕೊಡುತ್ತೇವೆ' ಎಂದರು

## ಕನಕ-ಬಸವ ಚಿಂತನೆಗಳು ಸಮಾಜಕ್ಕೆ ದಾರಿದೀಪ: ಯತೀಂದ್ರ



ವಿಜಯಪುರ : ಕಾಯಕ, ದಾಸೋಹ ಹಾಗೂ ಸಮಾನತೆಯ ಸಂದೇಶ ಸಾರಿದ ದಾಸ ಸಾಹಿತ್ಯ ಸಮಾಜ ಪರಿವರ್ತನೆಗೆ ದೊಡ್ಡ ಕೊಡುಗೆ ನೀಡಿದೆ. ಕನಕದಾಸರಂತಹ ಮಹನೀಯರ ಸಮಾಜಮುಖಿ ಚಿಂತನೆಗಳು ಇಂದಿಗೂ ನಮಗೆಲ್ಲ ದಾರಿ ತೋರಿಸುತ್ತಿವೆ. ಎಲ್ಲ ವರ್ಗದ ಜನರನ್ನು ಒಟ್ಟಿಗೆ ಸೇರಿಸಿಕೊಂಡು ಅಭಿವೃದ್ಧಿಯ ಹಾದಿಯಲ್ಲಿ ಮುಂದೆ ಸಾಗುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ಧರಾಮಯ್ಯ ಹೇಳಿದರು.

ತಿಕೋಟಾ ತಾಲೂಕಿನ ಬಿಜ್ಜರಗಿ ಗ್ರಾಮದಲ್ಲಿ ಭಾನುವಾರ ಹಂಜಗಿಸಿದ್ಧೇಶ್ವರ ಹಾಗೂ ಹಿರೋಡೇಶ್ವರ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಮತ್ತು ಕನಕದಾಸ ವೃತ್ತ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಎಂ.ಬಿ. ಪಾಟೀಲರ ಕೈ ಬಲಪಡಿಸಿ'

ಎಂ.ಬಿ. ಪಾಟೀಲ ಅವರು ಒಳ್ಳೆಯ ನಾಯಕರು. ಜಲಸಂಪನ್ಮೂಲ ಸಚಿವರಾಗಿದ್ದಾಗ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ಈ ಭಾಗದ ರೈತರ ಬದುಕಿಗೆ ಬೆಳಕು ತಂದಿದ್ದಾರೆ. ಈಗ ಕೈಗಾರಿಕೆ ಸಚಿವರಾಗಿ ವಿದೇಶಿ ಬಂಡವಾಳವನ್ನು ಕರ್ನಾಟಕಕ್ಕೆ ಸೆಳೆಯುವ ಮೂಲಕ ರಾಜ್ಯವನ್ನು ದೇಶದ ಪ್ರಮುಖ ಹೂಡಿಕೆ ತಾಣವನ್ನಾಗಿಸಲು ಶ್ರಮಿಸುತ್ತಿದ್ದಾರೆ. ಅವರ ಜನಸೇವೆಯನ್ನು ಜನರು ಗುರುತಿಸಿ ಸದಾ ಬೆಂಬಲಿಸಬೇಕು ಎಂದು ಯತೀಂದ್ರ ಸಿದ್ಧರಾಮಯ್ಯ ಹೇಳಿದರು.

**ಬಿಜ್ಜರಗಿ'ಯಿಂದ ಅಭಿವೃದ್ಧಿಯ ಸಂದೇಶ**

- **ಕನಕ-ಬಸವ ಚಿಂತನೆಗಳ ಸ್ಮರಣೆ**
- **ಸಿದ್ದೇಶ್ವರರ ತತ್ವಗಳಿಗೆ ಸಚಿವರ ನಮನ**
- **ಎಂ.ಬಿ. ಪಾಟೀಲರ ಅಭಿವೃದ್ಧಿ ಕೆಲಸಗಳಿಗೆ ಯತೀಂದ್ರ ಸಿದ್ಧರಾಮಯ್ಯ ಮೆಚ್ಚುಗೆ**
- **ರಾಜ್ಯಕ್ಕೆ ಬಂಡವಾಳ ಆಕರ್ಷಣೆಯಲ್ಲಿ ಕರ್ನಾಟಕ ಮುಂಚೂಣಿ: ಯತೀಂದ್ರ**
- **ವಿಜಯಪುರ ಅಭಿವೃದ್ಧಿಗೆ ಜನರ ಸಹಕಾರಕ್ಕೆ ಮನವಿ**

ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರದ ಪ್ರಯತ್ನಗಳ ಜೊತೆಗೆ ಜನರ ಸಹಕಾರವೂ ತುಂಬಾ ಮುಖ್ಯ. ವಿಜಯಪುರ ಜಿಲ್ಲೆಯ ಜನರು ತಮ್ಮ ತಂದೆ ಸಿದ್ದರಾಮಯ್ಯ ಅವರಿಗೆ ನೀಡಿದ ಪ್ರೀತಿ, ಶಕ್ತಿ ಮತ್ತು ಬೆಂಬಲವನ್ನು ತಮ್ಮ ಮೇಲೂ ಮುಂದುವರಿಸಿ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.ಸಿದ್ದೇಶ್ವರರ ತತ್ವಗಳೇ ನಮ್ಮ ದಾರಿ: ಎಂ.ಬಿ. ಪಾಟೀಲ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ತತ್ವಾದರ್ಶಗಳು ನಮಗೆಲ್ಲ ಮಾದರಿ. ಬಿಜ್ಜರಗಿ ಅವರ ಜನ್ಮಭೂಮಿಯಾಗಿದ್ದು, ಅವರು ಬದುಕಿನುದ್ದಕ್ಕೂ ನೀಡಿದ ಸಂದೇಶಗಳು ಇಂದಿಗೂ ಸಮಾಜಕ್ಕೆ ಪ್ರೇರಣೆಯಾಗಿವೆ ಎಂದರು.

## ಎಲ್‌ಪಿಜಿ ಕಾಳಸಂತೆಗೆ ಕಡಿವಾಣ:

## ಅಕ್ರಮ ಬಳಕೆ ತನಿಖೆಗೆ ಕೇಂದ್ರದ ಸೂಚನೆ; ಪೆಟ್ರೋಲಿಯಂ ಸಚಿವಾಲಯಕ್ಕೆ ದೂರು ರವಾನೆ



ನವದೆಹಲಿ : ದೇಶೀಯ ಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಗಳಿಗೆ ಹಾಗೂ ವಾಹನಗಳಿಗೆ ಅಕ್ರಮವಾಗಿ ಬಳಸುತ್ತಿರುವುದು, ಕಾಳಸಂತೆ ನಡೆಸುತ್ತಿರುವುದು ಮತ್ತು ಇದರಿಂದ ಸಾರ್ವಜನಿಕ ಸುರಕ್ಷತೆಗೆ ಅಪಾಯ ಉಂಟಾಗುತ್ತಿರುವ ಆರೋಪಗಳ ಕುರಿತು ಕೇಂದ್ರ ಸರ್ಕಾರ ಗಂಭೀರ ಕ್ರಮಕ್ಕೆ ಮುಂದಾಗಿದೆ.

ಈ ಸಂಬಂಧ ಗ್ರಾಹಕ ದಕ್ಷತಾ ಕಲ್ಯಾಣ್ ಫೌಂಡೇಶನ್ ಸಲ್ಲಿಸಿರುವ ದೂರು ಹಾಗೂ ಪುರಾವೆಗಳನ್ನು ಪರಿಶೀಲನೆಗಾಗಿ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ರವಾನಿಸಿದೆ. ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ, ಆರೋಪಗಳು ಸಾಬೀತಾದಲ್ಲಿ ತಪ್ಪಿತಸ್ಥರು ಹಾಗೂ ಸಂಬಂಧಪಟ್ಟ ಎಲ್‌ಪಿಜಿ ಏಜೆನ್ಸಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯ ಅಧೀನ ಕಾರ್ಯದರ್ಶಿ ವಿಕಾಸ್ ಕುಮಾರ್ ಅವರು ಜುಲೈ 29ರಂದು ಹೊರಡಿಸಿರುವ ಕಚೇರಿ ಜ್ಞಾಪನೆಯಲ್ಲಿ, ಈ ವಿಷಯವು ಅಗತ್ಯ ಸರಕುಗಳ ಕಾಯ್ದೆ-1955ರ ವ್ಯಾಪ್ತಿಗೆ ಒಳಪಡುವುದರಿಂದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮೂಲಕ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಫೌಂಡೇಶನ್ ತನ್ನ ದೂರಿನಲ್ಲಿ, 14.2 ಕೆಜಿ ಗೃಹಬಳಕೆಯ ಸಿಲಿಂಡರ್‌ಗಳಿಂದ ಪೈಪ್‌ಗಳ ಮೂಲಕ ವಾಹನಗಳು ಹಾಗೂ ಇತರ ವಾಣಿಜ್ಯ ಸಿಲಿಂಡರ್‌ಗಳಿಗೆ ಎಲ್‌ಪಿಜಿ ವರ್ಗಾವಣೆ ಮಾಡುವ ಅಕ್ರಮ ವ್ಯವಸ್ಥೆ ಕೆಲವು ಕಡೆ ನಡೆಯುತ್ತಿದೆ ಎಂದು ಆರೋಪಿಸಿದೆ. ಇಂತಹ ವಿಧಾನದಿಂದ ಸ್ಫೋಟ ಹಾಗೂ ಅಗ್ನಿ ಅವಘಡಗಳ ಅಪಾಯ ಹೆಚ್ಚಾಗಿದ್ದು, ಸಾರ್ವಜನಿಕರ ಜೀವಕ್ಕೆ ಅಪಾಯ ಎದುರಾಗಬಹುದು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೇಶೀಯ ಮತ್ತು ವಾಣಿಜ್ಯ ಎಲ್‌ಪಿಜಿಗೆ ಅನ್ವಯಿಸುವ ತೆರಿಗೆ ದರದಲ್ಲಿನ ವ್ಯತ್ಯಾಸವನ್ನು ಬಳಸಿಕೊಂಡು ಅಕ್ರಮ ವಾಣಿಜ್ಯ ನಡೆಯುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಗೃಹಬಳಕೆಯ ಎಲ್‌ಪಿಜಿ ಅಕ್ರಮವಾಗಿ ವಾಣಿಜ್ಯ ಬಳಕೆಗೆ ತಿರುಗಿದರೆ ಸರ್ಕಾರಕ್ಕೆ ತೆರಿಗೆ ಆದಾಯದ ನಷ್ಟವಾಗುವ ಸಾಧ್ಯತೆಯಿದೆ ಎಂದು ಫೌಂಡೇಶನ್ ಗಮನ ಸೆಳೆದಿದೆ. ಕೆಲವು ಎಲ್‌ಪಿಜಿ ವಿತರಕರು ಹಾಗೂ ಕಾಳಸಂತೆಕೋರರ ನಡುವೆ ಶಾಮೀಲಾಗಿರುವ ಆರೋಪವನ್ನೂ ಫೌಂಡೇಶನ್ ಮಾಡಿದೆ.

# ಆಗಸ್ಟ್ 26ರಂದು ಪಾವಗಡದಲ್ಲಿ ಮಿಲಾದ್-ಉನ್-ನಬಿ ಜುಲೂಸ್ ಹಬ್ಬ



ಪಾವಗಡ : ಮಿಲಾದ್-ಉನ್-ನಬಿ ಹಬ್ಬವನ್ನು ಈ ವರ್ಷವೂ ಸಂಭ್ರಮ, ಶಿಸ್ತು ಹಾಗೂ ಸೌಹಾರ್ದತೆಯಿಂದ ಆಚರಿಸಲು ಪಾವಗಡ ಜಾಮಿಯಾ ಮಸೀದಿಯ ಕಮಿಟಿ ಹಾಗೂ ನೌಜವಾನ್ ಕಮಿಟಿ ವತಿಯಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಮುಸ್ಲಿಂ ಸಮುದಾಯದ ಮುಖಂಡರು ತಿಳಿಸಿದರು.

ಪಟ್ಟಣದ ಜಾಮಿಯಾ ಮಸೀದಿಯಲ್ಲಿ ನಡೆದ ಸಭೆಯ ಬಳಿಕ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಪುರಸಭಾ ಸದಸ್ಯ ಹಾಗೂ ಮುಸ್ಲಿಂ ಸಮುದಾಯದ ಮುಖಂಡ ಎಂ.ಎ.ಜಿ. ಇಮ್ರಾನ್, ಆಗಸ್ಟ್ 26ರಂದು ಬೆಳಿಗ್ಗೆ 9.30ಕ್ಕೆ ಜಾಮಿಯಾ ಮಸೀದಿಯಲ್ಲಿ ಭಕ್ತರು ಸೇರಲಿದ್ದು, 10 ಗಂಟೆಗೆ ಜುಲೂಸ್ ಮೆರವಣಿಗೆ ಆರಂಭವಾಗಲಿದೆ ಎಂದು ಹೇಳಿದರು. ಪೆನುಕೊಂಡ ಊರು ಬಾಗಿಲು, ರೊಪ್ಪ ಗ್ರಾಮಕ್ಕೆ ತೆರಳಿ ನಂತರ ಮರಳಿ ಶನಿಮಹಾತ್ಮ ಸರ್ಕಲ್ ಹಾಗೂ ಸಿರಾ ರಸ್ತೆಯ ಮಾರ್ಗವಾಗಿ ಮೆರವಣಿಗೆ ಸಾಗಲಿದೆ ಎಂದರು.

ನೌಜವಾನ್ ಕಮಿಟಿ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಸಮಾಜಮುಖಿ ಸೇವಾ ಕಾರ್ಯಗಳನ್ನು ಮುಂದುವರಿಸಲಾಗುತ್ತಿದ್ದು, ಬಡ ಯುವಕ ಯುವತಿಯರಿಗೆ ಉಚಿತ ವಿವಾಹದೊಂದಿಗೆ ಸಂಸಾರ ಜೀವನ ನಡೆಸಲು ಅಗತ್ಯವಾಗುವ ಪೀಠೋಪಕರಣಗಳನ್ನು ನೀಡಲಾಗುವುದು, ಆಶ್ರಮಗಳು ಹಾಗೂ ಆಸ್ಪತ್ರೆಗಳಿಗೆ ಹಣ್ಣು ವಿತರಣೆ ಸೇರಿದಂತೆ ವಿವಿಧ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಆಗಸ್ಟ್ 27ರಂದು ಸಂಜೆ 7 ಗಂಟೆಗೆ ಜಾಮಿಯಾ ಮಸೀದಿಯಲ್ಲಿ 12 ದಿನಗಳಿಂದ ನಡೆಯುತ್ತಿರುವ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜೀವನ ಚರಿತ್ರೆ ಪ್ರವಚನ ಸರಣಿಯ ಸಮಾರೋಪ ಕಾರ್ಯಕ್ರಮ ನಡೆಯಲಿದ್ದು, ಎಲ್ಲ ಧರ್ಮೀಯರು ಭಾಗವಹಿಸುವಂತೆ ಆಹ್ವಾನ ನೀಡಿದರು.

ಪ್ರವಾದಿ ಪೈಗಂಬರ್ ಅವರು ಬೋಧಿಸಿದ ಪ್ರೀತಿ, ಶಾಂತಿ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಖಂಡರು ಕರೆ ನೀಡಿದರು.

ಜಾಮಿಯಾ ಮಸೀದಿ ಮುತುವಲ್ಲಿ ಹಾಗೂ ಸಮುದಾಯದ ಮುಖಂಡರಾದ ಲತೀಫ್ ಸಾಬ್, ಜಾವೀದ್, ನೀಸಾರ್, ಅಲ್ತಾಫ್, ಮೆಹಬೂಬ್ ಸಾಬ್, ಪೈಯಾಜ್, ತಮೀಜ್ ನವಾಬ್, ಇಸ್ಮಾಯಿಲ್, ಶಾ ಬಾಬು, ಹಿದಾಯತ್, ಅಶ್ಮತ್, ಶೌಕತ್ ಆಲಿ, ಆಟೋ ಸಾಧಿಕ್, ಷಫಿ, ರೀಯಾಜ್, ಸಿಕಂದರ್, ಬೀಡಾ ಸಾಧಿಕ್, ಹೋಟೆಲ್ ಷಫಿ, ಬಲ್ಲು, ಆಕೀಬ್ ಸೇರಿದಂತೆ ಹಲವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಚಿಕ್ಕನಾಯಕನಹಳ್ಳಿ ತಾಲೂಕು ಮಡಿವಾಳ ಸಂಘದ ಸಭೆ: ಸಂಘಟನಾ ಬಲವರ್ಧನೆಗೆ ಮಹತ್ವದ ನಿರ್ಧಾರ



ಚಿಕ್ಕನಾಯಕನಹಳ್ಳಿ : ಪಟ್ಟಣದ ವೀರಲಕ್ಕಮ್ಮ ಬಡಾವಣೆಯಲ್ಲಿರುವ ಶ್ರೀ ಮಡಿವಾಳ ಮಾಚಿದೇವ ಸಭಾಭವನದಲ್ಲಿ ತಾಲೂಕು ಮಡಿವಾಳ ಸಂಘದ ಸಭೆ ನಡೆಯಿತು. ಸಭೆಯಲ್ಲಿ ಸಂಘದ ಮುಂದಿನ ಕಾರ್ಯಚಟುವಟಿಕೆಗಳು, ಸಂಘಟನೆಯ ಬಲವರ್ಧನೆ, ಸದಸ್ಯತ್ವ ನೋಂದಣಿ ಸೇರಿದಂತೆ ಹಲವು ಪ್ರಮುಖ ವಿಚಾರಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಸಂಘದ ಹಲವು ಸಭೆಗಳಿಗೆ ನಿರಂತರವಾಗಿ ಗೈರಾಗಿದ್ದ ಕೆಲವು ಸದಸ್ಯರನ್ನು ಸಂಘದಿಂದ ಕೈಬಿಡುವ ಕುರಿತು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಚಿನ್ನಿ ಪುರುಷೋತ್ತಮ್, ಬಸವಲಿಂಗಯ್ಯ, ಗೋಪಾಲಯ್ಯ, ಗಿರೀಶ್ ಅವಳಗೆರೆ, ಕರಿಯಪ್ಪ ಬರಕನಹಾಲ್, ಶಾಮಣ್ಣ ಹೊಯ್ಸಳಕಟ್ಟೆ, ಶಂಕರಯ್ಯ ಸೋರಲಮಾವು, ಸಿದ್ದರಾಮಯ್ಯ ಜೋಡಿಕಲ್ಲೇನಹಳ್ಳಿ ಹಾಗೂ ಮೋಹನ್ ಕುಮಾರ್ ಹುಳಿಯಾರು ಅವರನ್ನು ಸಂಘದಿಂದ ಕೈಬಿಡಲು ನಿರ್ಧರಿಸಲಾಯಿತು. ಇದೇ ವೇಳೆ ಸಂಘಕ್ಕೆ ನೂತನ ಸದಸ್ಯರನ್ನಾಗಿ ಪರಮೇಶ್ ಹುಳಿಯಾರು, ವರದರಾಜು, ಮಂಜುನಾಥ್ ಹೊಯ್ಸಳಕಟ್ಟೆ, ನಿವೃತ್ತ ಶಿಕ್ಷಕ ಕುಮಾರಯ್ಯ ಹಂದನಕೆರೆ, ನಿವೃತ್ತ ಶಿಕ್ಷಕ ಶಾಂತವೀರಪ್ಪ ದೊಡ್ಡ ಎಣ್ಣೇಗೆರೆ, ಗುರುಮೂರ್ತಿ ಕಂದಿಕೆರೆ, ವಿಶ್ವನಾಥ್ ಸಾಲ್ಕಟ್ಟೆ ಪಾಳ್ಯ, ಕುಮಾರಯ್ಯ ಹನುಮಂತನಹಳ್ಳಿ ಹಾಗೂ ಪ್ರಸಾದ್ ಜೋಡಿಕಲ್ಲೇನಹಳ್ಳಿ ಅವರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಸಂಘದ ಪದಾಧಿಕಾರಿಗಳ ಜವಾಬ್ದಾರಿಗಳಲ್ಲಿಯೂ ಬದಲಾವಣೆ ಮಾಡಲಾಗಿದ್ದು, ಗೋಡೆಕೆರೆಯ ಗಂಗಾಧರಯ್ಯ ಅವರನ್ನು ಗೌರವಾಧ್ಯಕ್ಷರಾಗಿ, ಹೆಸರಹಳ್ಳಿಯ ಮಂಜುನಾಥ್ ಅವರನ್ನು ಕಾರ್ಯದರ್ಶಿಯಾಗಿ ಹಾಗೂ ಚಿಕ್ಕನಾಯಕನಹಳ್ಳಿಯ ವರದರಾಜು ಅವರನ್ನು ಖಜಾಂಚಿಯಾಗಿ ನೇಮಕ ಮಾಡಲಾಗಿದೆ. ತಾಲೂಕು ಮಡಿವಾಳ ಸಂಘ-ಕ್ಕೆ ಸ್ವಂತ ಜಾಗ ಕಲ್ಪಿಸುವ ಉದ್ದೇಶದಿಂದ ಈಗಾಗಲೇ ತಹಸೀಲ್ದಾರ್ ಹಾಗೂ ಶಾಸಕರಿಗೆ ಮನವಿ ಸಲ್ಲಿಸಲಾಗಿದೆ. ಸುಮಾರು ಎರಡು ಎಕರೆ ಜಮೀನು ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಮುಂದಿನ ಸಭೆಯೊಳಗಾಗಿ ಸಂಘದ ನವೀಕರಣ ಪ್ರಕ್ರಿಯೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ. ನಾಲ್ಕನೇ ವಾರದಲ್ಲಿ ಹಂದನಕೆರೆಯಲ್ಲಿ ಸಭೆ ನಡೆಸಲು ನಿರ್ಧರಿಸಲಾಗಿದ್ದು, ತಾಲೂಕು ಮಡಿವಾಳ ನೌಕರರ ಸಂಘ, ತಾಲೂಕು ಮಡಿವಾಳ ಯುವಕರ ಸಂಘ ಹಾಗೂ ತಾಲೂಕು ಮಡಿವಾಳ ಮಹಿಳಾ ಸಂಘ ಸ್ಥಾಪಿಸುವ ಕುರಿತು ನಿರ್ಧಾರ ಕೈಗೊಳ್ಳಲಾಯಿತು.

ಮುಂದಿನ ಸಭೆಗೆ ಹಳೆಯ ಟ್ರಸ್ಟ್‌ನ ಎಲ್ಲ ಸದಸ್ಯರನ್ನು ಆಹ್ವಾನಿಸಿ ಸಂಘದ ಮುಂದಿನ ರೂಪುರೇಷೆಗಳ ಕುರಿತು ಮಹತ್ವದ ಚರ್ಚೆ ನಡೆಸಲು ಸಭೆ ನಿರ್ಧರಿಸಿದೆ.

# ಕಾಡುಗೊಲ್ಲ ಯುವ ಸಮುದಾಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಿ: ಕರೆ

ಪಾವಗಡ: ಯುವ ಸಮುದಾಯವು ಶಿಕ್ಷಣ-ಕ್ಕೆ ಪ್ರಥಮ ಆದ್ಯತೆ ನೀಡುವ ಮೂಲಕ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಫಲರಾಗಬೇಕು ಎಂದು ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಶಾಸಕರಾದ ಹೆಚ್.ವಿ. ವೆಂಕಟೇಶ್ ರವರು ಕರೆ ನೀಡಿದರು.




ಪಟ್ಟಣದ ಎಸ್.ಎಸ್.ಕೆ. ಸಮುದಾಯ ಭವನದಲ್ಲಿ ಕಾಡುಗೊಲ್ಲ ಯುವ ಸೇನೆ ಸಂಘದ ವತಿಯಿಂದ ಆಯೋಜಿಸಲಾಗಿದ್ದ 2025-26ನೇ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು ಕಳೆದ 40 ವರ್ಷಗಳಿಂದ ನನ್ನ ತಂದೆಯವರು ಹಾಗೂ ನಾನು ಯಾದವ ಜನಾಂಗದ ಸರ್ವತೋಮುಖ ಏಳಿಗೆಗೆ ನಿರಂತರವಾಗಿ ಶ್ರಮಿಸಿದ್ದೇವೆ. ಮುಂಬರುವ ದಿನಗಳಲ್ಲೂ ಸಹ ನಮ್ಮ ಸಹಕಾರ ಮತ್ತು ಬೆಂಬಲ ಕಾಡುಗೊಲ್ಲ ಸಮುದಾಯಕ್ಕೆ ಸದಾ ಇರಲಿದೆ,ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಯುವಕರು ಹೆಚ್ಚಿನ ಪರಿಶ್ರಮ ಪಡಬೇಕು. ಕಾಡುಗೊಲ್ಲ ಸಮುದಾಯದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮತ್ತು ಹಾಸ್ಟೆಲ್ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ಸರ್ಕಾರ ಹಾಗೂ ಕ್ಷೇತ್ರ ಮಟ್ಟದಲ್ಲಿ ಒದಗಿಸಲು ನಾನು ಸದಾ ಬದ್ಧನಾಗಿರುತ್ತೇನೆ

ಯುವಕರು ದುರಭ್ಯಾಸಗಳಿಂದ ದೂರವಿದ್ದು, ಸಂಘಟಿತರಾಗಿ ಸಮಾಜದ ಮುಂಚೂಣಿಗೆ ಬರಬೇಕೆಂದು ಕಿವಿಮಾತು ಹೇಳಿದರು.

ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರೋತ್ಸಾಹಕ್ಕಾಗಿ ಶಾಸಕರು ತಮ್ಮ ವೈಯಕ್ತಿಕವಾಗಿ 1,50,000 ರೂಪಾಯಿಗಳ ಗೌರವ ಧನವನ್ನು ನೀಡಿ-ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕಾಡುಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಹಾರೋಗೆರೆ ಮಹೇಶ್ ರವರು ಕಾಡುಗೊಲ್ಲ ಸಮುದಾಯವು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದು, ನಿಗಮದ ವತಿಯಿಂದ ನೀಡಲಾಗುವ ವಿವಿಧ ಶೈಕ್ಷಣಿಕ ಮತ್ತು ಸ್ವಯಂ ಉದ್ಯೋಗ ಯೋಜನೆಗಳನ್ನು ವಿದ್ಯಾರ್ಥಿಗಳು ಹಾಗೂ ಯುವಜನರು ಸದುಪಯೋಗಪಡಿಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಕ್ಕಾಗ ಮಾತ್ರ ಸಮುದಾಯದ ನೈಜ ಅಭಿವೃದ್ಧಿ ಸಾಧ್ಯ

ಕಾಡುಗೊಲ್ಲ ಸಮುದಾಯಕ್ಕೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಜಾನಪದ ಹಿನ್ನೆಲೆಯಿದೆ. ಯುವ ಪೀಳಿಗೆಯು ನಮ್ಮ ಮೂಲ ಸಂಸ್ಕೃತಿ, ಕಲೆ ಹಾಗೂ ಮೌಲ್ಯಗಳನ್ನು ಮರೆಯದೆ, ಆಧುನಿಕ ಶಿಕ್ಷಣವನ್ನು ಪಡೆದು ಐಎಎಸ್, ಐಪಿಎಸ್ ಹಾಗೂ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಯುವಜನರು ಕೇವಲ ನೌಕರಿಯ ಭರವಸೆಯಷ್ಟೇ ಅಲ್ಲದೆ, ಸ್ವಯಂ ಉದ್ಯೋಗಿಗಳಾಗಿ ಬೆಳೆದು ಮತ್ತೊಬ್ಬರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆಯಬೇಕು. ಸಮುದಾಯದ ಪ್ರತಿಯೊಬ್ಬ ಬಡ ವಿದ್ಯಾರ್ಥಿಯ ಬೆನ್ನಲುಬಾಗಿ ನಿಲ್ಲಲು ನಿಗಮವು ಸದಾ ಸಿದ್ಧವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಾಡುಗೊಲ್ಲ ಸಮಾಜದ ಧರ್ಮಗುರುಗಳು ಹಾಗೂ ವನಕಲ್ಲು ಮಠಾಧ್ಯಕ್ಷರಾದ ಶ್ರೀ ಡಾ. ಬಸವ ರಾಮಾನಂದ ಸ್ವಾಮೀಜಿ ಯವರು ಮಾತನಾಡಿ ಸಂಸ್ಕಾರಯುತ ಶಿಕ್ಷಣ ಮತ್ತು ಸಂಘಟಿ-ತ ಹೋರಾಟದಿಂದ ಮಾತ್ರ ಯಾವುದೇ ಸಮಾಜದ ಅಭಿವೃದ್ಧಿ ಸಾಧ್ಯ. ಕಾಡುಗೊಲ್ಲ ಸಮುದಾಯವು ತನ್ನದೇ ಆದ ವೈಶಿಷ್ಟ್ಯಮಯ ಜಾನಪದ ಸಂಸ್ಕೃತಿ ಮತ್ತು ದೈವಿಕ ಪರಂಪರೆಯನ್ನು ಹೊಂದಿದೆ.

ವಿದ್ಯಾರ್ಥಿಗಳು ಅಂಕ ಗಳಿಕೆಯ ಜೊತೆಗೆ ಸನ್ಮಾರ್ಗದಲ್ಲಿ ನಡೆದು, ಹೆತ್ತ ತಂದೆ-ತಾಯಿ ಹಾಗೂ ಸಮುದಾಯಕ್ಕೆ ಒಳ್ಳೆಯ ಹೆಸರು ತರಬೇಕು ಸಮುದಾಯದ ಯುವಕರು ದುರಭ್ಯಾಸಗಳಿಗೆ ಬಲಿಯಾಗದೆ, ದುಡಿಮೆ ಮತ್ತು ಶಿಕ್ಷಣಕ್ಕೆ ತಮ್ಮ ಶಕ್ತಿಯನ್ನು ವಿನಿಯೋಗಿಸಬೇಕು. ಕಾಡುಗೊಲ್ಲ ಸಮುದಾಯದ ಪ್ರತಿಯೊಂದು ಕಟುಂಬವೂ ಶೈಕ್ಷಣಿಕವಾಗಿ ಜಾಗೃತಗೊಂಡಾಗ ಮಾತ್ರ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಲು ಸಾಧ್ಯ. ಯುವ ಸೇನೆ ಸಂಘವು ಇಂತಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಆಶೀರ್ವಚನ ನೀಡಿ-ದರು

ಮಾಜಿ ಶಾಸಕರಾದ ಕೆ.ಎಂ. ತಿಮ್ಮರಾಯಪ್ಪ ರವರು ಮಾತನಾಡಿ ಕಾಡುಗೊಲ್ಲ ಸಮುದಾಯವು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುನ್ನಲೆಗೆ ಬರಬೇಕಾದರೆ ಯುವಜನರ ಸಂಘಟನೆ ಅತ್ಯಗತ್ಯ. ಹಿಂದುಳಿದ ವರ್ಗಗಳ ಹಕ್ಕುಗಳನ್ನು ಪಡೆದುಕೊಳ್ಳಲು ನಾವೆಲ್ಲರೂ ಒಂದಾಗಿ ಶ್ರಮಿಸಬೇಕಿದೆ. ವಿದ್ಯಾರ್ಥಿಗಳು ಕೇವಲ ಅಂಕಗಳಿಗೆ ಸೀಮಿತವಾಗದೆ, ಸಮಾಜಮುಖಿ ಚಿಂತನೆಗಳನ್ನು ಬೆಳೆಸಿಕೊಂಡು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ನಾಯಕತ್ವ ಬೆಳೆಸಿಕೊಳ್ಳಬೇಕು ತಾಲ್ಲೂಕಿನಲ್ಲಿ ಕಾಡುಗೊಲ್ಲ ಸಮುದಾಯದ ಯುವಕರು ಸಂಘಟಿತರಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯ. ಶೈಕ್ಷಣಿಕವಾಗಿ ಯುವಜನತೆಗೆ ಸಿಗಬೇಕಾದ ಸೌಲಭ್ಯಗಳು ಮತ್ತು ಮೀಸಲಾತಿಯ ಸೌಲಭ್ಯಗಳನ್ನು ತಲುಪಿಸುವಲ್ಲಿ ಜನಪ್ರತಿನಿಧಿಗಳು ಹಾಗೂ ಸಮುದಾಯದ ನಾಯಕರು ಶ್ರಮಿಸಬೇಕು. ವಿದ್ಯಾರ್ಥಿಗಳು ತಮಗೆ ಸಿಕ್ಕ ಪ್ರೋತ್ಸಾಹವನ್ನು ಸದುಪಯೋಗಪಡಿಸಿಕೊಂಡು ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜದ ಋಣ ತೀರಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು

ಈ ಸಂದರ್ಭದಲ್ಲಿ ಜಾನಪದ ಹಿನ್ನೆಲೆ ಗಾಯಕ ಮೋಹನ್, ಕಾಡುಗೊಲ್ಲ ಯುವ ಸೇನೆ ಸಂಘದ ಅಧ್ಯಕ್ಷರಾದ ದಿವ್ಯ ತೇಜ್ ಯಾದವ್, ಗೌರವಧ್ಯಕ್ಷರಾದ ನಾಗಣ್ಣ, ನಿವೃತ್ತ ಅಧಿಕಾರಿ ಚಿಕ್ಕಪ್ಪಯ್ಯ,ಓಬಳಾಪುರ ಚಂದ್ರಶೇಖರ್, ಲಿಂಗದಹಳ್ಳಿ ವೀರೇಂದ್ರ, ಜಾನಪದ ಕಲಾವಿದರಾದ ವಿರ್ಲಗೊಂದಿ ನಾಗರಾಜ್, ಈರಣ್ಣ, ಸಿ ಕೆ ಪುರ ವಿ ಎಸ್ ಎಸ್ ಎನ್ ಅಧ್ಯಕ್ಷರಾದ ದೇವರಹಟ್ಟಿ ಶಿವಣ್ಣ,ಯರ್ರಪ್ಪ, ಪ್ರಾಧ್ಯಪಕರಾದ ನಾಗೇಂದ್ರಪ್ಪ,ಮಲ್ಲಯ್ಯ ಸೇರಿದಂತೆ ಇನ್ನೂ ಅನೇಕ ಮುಖಂಡರು, ಯುವ ಸೇನೆ ಸಂಘದ ಪದಾಧಿಕಾರಿಗಳು ವಿದ್ಯಾರ್ಥಿಗಳು ಪೋಷಕರು ಹಾಜರಿದ್ದರು

# ವೈದ್ಯರಿಗೆ ಡಾ. ಕೆ.ಎಚ್. ನಾಗರಾಜ್ ಮಹತ್ವದ ಕರೆ! "ಸಂದಿಗ್ಧ ಸಂದರ್ಭಗಳಲ್ಲಿ ಒಗ್ಗಟ್ಟಾಗಿರಿ"



ಚಿಕ್ಕನಾಯಕನಹಳ್ಳಿ: ವೈದ್ಯಕೀಯ ವೃತ್ತಿಯ ಘನತೆ, ಪವಿತ್ರತೆ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಸಂದಿಗ್ಧ ಸಂದರ್ಭಗಳಲ್ಲಿ ವೈದ್ಯರೆಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಚಿಕ್ಕನಾಯಕನಹಳ್ಳಿ ತಾಲ್ಲೂಕು ವೈದ್ಯರ ಸಂಘದ ಅಧ್ಯಕ್ಷ ಡಾ. ಕೆ.ಎಚ್. ನಾಗರಾಜ್ ಹೇಳಿದರು. ಹುಳಿಯಾರಿನ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ವೈದ್ಯರ ಸಂಘದ ವತಿಯಿಂದ, ಗೌರವಾಧ್ಯಕ್ಷ ಸಿ.ಜೆ. ಜಗದೀಶ್ ಅವರ ಮಾರ್ಗದರ್ಶನದಲ್ಲಿ ಆಯೋಜಿಸಿದ್ದ ಮಾಸಿಕ ಸಭೆ ಹಾಗೂ ಮುಂದುವರಿದ ವೈದ್ಯಕೀಯ ಶಿಕ್ಷಣ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವೈದ್ಯರು ತಮ್ಮ ವೃತ್ತಿಯಲ್ಲಿ ನಿರಂತರ ಪರಿಶ್ರಮ, ತನ್ಮಯತೆ ಹಾಗೂ ಕಾರ್ಯತತ್ಪರತೆಯಿಂದ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ವೈದ್ಯಕೀಯ ಕ್ಷೇತ್ರಕ್ಕೂ ತನ್ನದೇ ಆದ ಇತಿಮಿತಿಗಳಿವೆ. ಇಂತಹ ಸಂದರ್ಭಗಳಲ್ಲಿ ಜನಸಾಮಾನ್ಯರು, ಅಧಿಕಾರಿಗಳು ಹಾಗೂ ಮಾಧ್ಯಮಗಳು ವೈದ್ಯರೊಂದಿಗೆ ಸ್ಪಂದಿಸುವ ರೀತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಹಲವು ಬದಲಾವಣೆಗಳಾಗಿದ್ದು, ಈ ಕುರಿತು ವೈದ್ಯರಲ್ಲಿ ಕಳವಳ ಮೂಡಿದೆ ಎಂದು ತಿಳಿಸಿದರು. ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ಆಡಳಿತಾಧಿಕಾರಿ ಹಾಗೂ ತಜ್ಞ ವೈದ್ಯ ಡಾ. ನಟರಾಜ್ ಜಿ.ಎಚ್. ಅವರು ಹೃದಯಾಘಾತ, ಹಾವು ಕಡಿತ, ಅನಾಫಿಲ್ಯಾಕ್ಸಿಸ್, ಅಸ್ತಮಾ, ಮಧುಮೇಹ ಹಾಗೂ ಅಪಸ್ಮಾರ ಸೇರಿದಂತೆ ವಿವಿಧ ತುರ್ತು ಮತ್ತು ಸಾಮಾನ್ಯ ಕಾಯಿಲೆಗಳ ಚಿಕಿತ್ಸೆಯಲ್ಲಿ ಇತ್ತೀಚೆಗೆ ಆಗಿರುವ ವೈದ್ಯಕೀಯ ಸುಧಾರಣೆಗಳು ಹಾಗೂ ನವೀನ ಚಿಕಿತ್ಸಾ ವಿಧಾನಗಳ ಕುರಿತು ಸವಿವರವಾಗಿ ಮಾಹಿತಿ ನೀಡಿದರು.

ಪ್ರಾತ್ಯಕ್ಷಿಕೆ ಮೂಲಕ ವಿವಿಧ ಚಿಕಿತ್ಸಾ ವಿಧಾನಗಳನ್ನು ವಿವರಿಸಿದ ಅವರು, ವೈದ್ಯರಿಗೆ ಅಗತ್ಯವಾದ ಪ್ರಾಯೋಗಿಕ ತರಬೇತಿಯನ್ನೂ ನೀಡಿದರು. ತಾಲ್ಲೂಕು ವೈದ್ಯರ ಸಂಘದ ಕಾರ್ಯದರ್ಶಿ ಡಾ. ಪ್ರಶಾಂತ್ ಕುಮಾರ್ ಶೆಟ್ಟಿ ಮಾತನಾಡಿ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಶ್ರಮಿಸುತ್ತಿರುವ ವೈದ್ಯರಿಗೆ ಜನಸಾಮಾನ್ಯರು, ಮಾಧ್ಯಮಗಳು, ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಆರೋಗ್ಯ ಕಾರ್ಯಕರ್ತರು ಬೆನ್ನೆಲುಬಾಗಿ ನಿಲ್ಲಬೇಕು ಎಂದು ಹೇಳಿದರು.

"ವೈದ್ಯರೂ ಮನುಷ್ಯರೇ. ವೈದ್ಯಕೀಯ ವಿಜ್ಞಾನಕ್ಕೂ ಅದರದೇ ಆದ ಇತಿಮಿತಿಗಳಿವೆ ಎಂಬ ಅರಿವು ಎಲ್ಲರಲ್ಲೂ ಇರಬೇಕು. ಸಂದಿಗ್ಧ ಸಂದರ್ಭಗಳಲ್ಲಿ ವೈದ್ಯರು ಒಗ್ಗಟ್ಟಿನಿಂದಿದ್ದು, ಯುವ ವೈದ್ಯರಿಗೆ ಬೆಂಬಲ ನೀಡಬೇಕು. ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಗಳು ಹಾಗೂ ಅವರ ಸಂಬಂಧಿಕರು ಸಮಾಧಾನದಿಂದ ಸಹಕರಿಸಬೇಕು. ಅನಗತ್ಯವಾಗಿ ಮಾತನಾಡಿ ಚಿಕಿತ್ಸಾ ಪ್ರಕ್ರಿಯೆಗೆ ಅಡ್ಡಿಯಾಗಬಾರದು" ಎಂದು ಮನವಿ ಮಾಡಿದರು.

ಮುಂದಿನ ಮಾಸಿಕ ಸಭೆ ಹಾಗೂ ಮುಂದುವರಿದ ವೈದ್ಯಕೀಯ ಶಿಕ್ಷಣ ತರಬೇತಿಯ ಭಾಗವಾಗಿ ಸೆಪ್ಟೆಂಬರ್ 11ರಂದು ವೈದ್ಯಕೀಯ ಕಾನೂನು ಸಮಸ್ಯೆಗಳು ಹಾಗೂ ವೈದ್ಯರಿಗೆ ಅಗತ್ಯವಾದ ಕಾನೂನು ಸಲಹೆಗಳ ಕುರಿತು ತಜ್ಞರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ದೇವಿ ಚಿಕಿತ್ಸಾಲಯದ ಡಾ. ಭಾಸ್ಕರ್ ಹೆಗಡೆ ಹಾಗೂ ಡಾ. ಮಾಧವಿ ಹೆಗಡೆ ಅವರ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಲಾಯಿತು. ಹುಳಿಯಾರಿನ ಸಿದ್ದಶ್ರೀ ಚಿಕಿತ್ಸಾಲಯದ ಡಾ. ಎಸ್. ಉಮಾ, ಡಾ. ವೈ.ಜಿ. ಸಿದ್ದರಾಮಯ್ಯ, ಶ್ರೀ ವೀರಭದ್ರೇಶ್ವರ ಚಿಕಿತ್ಸಾಲಯದ ಎಚ್.ಈ. ಕವಿತಾ ಹಾಗೂ ಡಾ. ಕೆ.ಪಿ. ರಾಜಶೇಖರ್ ಕಾರ್ಯಕ್ರಮದ ಆಯೋಜನೆಯ ಜವಾಬ್ದಾರಿ ವಹಿಸಿದ್ದರು.

ತಾಲ್ಲೂಕಿನ ವಿವಿಧ ಭಾಗಗಳ ವೈದ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಡಾ. ಜಯಶೀಲ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಪ್ರಮುಖ ವಿಚಾರಗಳ ಕುರಿತು ಚರ್ಚೆ ನಡೆಯಿತು.

# "ಸಭೆ ನಡೆಸುವುದಷ್ಟೇ ಸರ್ಕಾರಕ್ಕೆ ವರದಿ ನೀಡುವ ಕೆಲಸವಾಗಬಾರದು"ಆರ್.ಎನ್. ಹಟ್ಟಿ ರಂಗಯ್ಯ

ಕುಣಿಗಲ್: ಪೊಲೀಸ್ ಠಾಣೆಯಲ್ಲಿ ನಡೆಯುವ ಕುಂದುಕೊರತೆ ಸಭೆಗಳು ಕೇವಲ ಸಭೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವ ಪ್ರಕ್ರಿಯೆಯಾಗದೆ, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ನ್ಯಾಯ ಒದಗಿಸುವ ವೇದಿಕೆಯಾಗಬೇಕು

ಕುಂದುಕೊರತೆ ಸಭೆಗಳಲ್ಲಿ ದಲಿತ ಮುಖಂಡ ಹಟ್ಟಿ ರಂಗಯ್ಯ ಮಾತನಾಡಿ ಆರು ತಿಂಗಳಿನಿಂದ ಕೊತ್ತಗೆರೆ ಹೋಬಳಿ ದೊಡ್ಡ ಮಳವಾಡಿ ಗ್ರಾಮದ ಪರಿಶಿಷ್ಟ ಜನಾಂಗಕ್ಕೆ ಸೇರಿದ ನೇತ್ರಾವತಿ ಎಂಬುವ ದಲಿತ ಮಹಿಳೆಯ ಸಮಸ್ಯೆಯನ್ನ ಬಗೆಹರಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ ಎಂದು ಇನ್ಸ್ಪೆಕ್ಟರ್ ಎಂ ನಾಯಕ್ ರವರಿಗೆ ಹೇಳಿಸಿದರು.ಅಧಿಕಾರಿಗಳ ಗಮನಕ್ಕೆ ತಂದರು ಸಮಸ್ಯೆ ತಿಂಗಳುಗಟ್ಟಲೆ ಬಾಕಿ ಉಳಿಯುತ್ತಿವೆ. ಅಧಿಕಾರಿಗಳ ಮುಂದೆ ದೂರುಗಳನ್ನು ಸ್ವೀಕರಿಸಿ, ಸಭೆ ಮುಗಿದ ಬಳಿಕ ಸಮಸ್ಯೆಗಳು ಮರೆತು ಹೋಗುವಂತಾಗಬಾರದು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.



"ಕುಂದುಕೊರತೆ ಸಭೆ ನಡೆಸಿ, ದೂರುಗಳನ್ನು ದಾಖಲಿಸಿಕೊಂಡು ಸರ್ಕಾರಕ್ಕೆ ವರದಿ ಕಳುಹಿಸುವುದಷ್ಟೇ ಅಧಿಕಾರಿಗಳ ಕರ್ತವ್ಯವಲ್ಲ. ದೂರುಗಳ ಮೇಲೆ ಕೈಗೊಂಡ ಕ್ರಮವೇನು, ಸಮಸ್ಯೆ ಬಗೆಹರಿದಿದೆಯೇ ಎಂಬುದನ್ನು ಪರಿಶೀಲಿಸಿ, ಸಂತ್ರಸ್ತರಿಗೆ ನ್ಯಾಯ ದೊರಕಿಸುವುದು ಮುಖ್ಯ" ಎಂದು ಹಟ್ಟಿ ರಂಗಯ್ಯ ಒತ್ತಾಯಿಸಿದರು.

ದಲಿತ ಸೇನೆ ಅಧ್ಯಕ್ಷ ವರದರಾಜು ಮಾತನಾಡಿ ಅಟ್ರಾಸಿಟಿ ಪ್ರಕರಣಗಳು ಎಷ್ಟು ದಾಖಲಾಗಿದ್ದಾವೆ ಇದರ ಸಂಪೂರ್ಣ ವರದಿಯನ್ನು ಸಭೆಗೆ ತಿಳಿಸಿ ಹಾಗೂ ನೊಂದವರಿಗೆ ಹೇಗೆ ರಕ್ಷಣೆಯನ್ನು ಇಲಾಖೆ ನೀಡುತ್ತಿದ್ದೀರಿ ಎಂಬುದನ್ನ ತಿಳಿಸಿ ಹಾಗೂ ಠಾಣಾ ವ್ಯಾಪ್ತಿಯಲ್ಲಿ ದಲಿತರು ನೀಡುವ ದೂರುಗಳ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ, ಕಾನೂನುಬದ್ಧವಾಗಿ ತ್ವರಿತ ಕ್ರಮ ಕೈಗೊಳ್ಳಬೇಕು. ಸಭೆಯಲ್ಲಿ ನೀಡಿದ ಭರವಸೆಗಳು ಕೇವಲ ಕಡತಗಳಲ್ಲೇ ಉಳಿಯದೆ, ಕಾರ್ಯರೂಪಕ್ಕೆ ಬರಬೇಕು ಎಂದು ಅವರು ಆಗ್ರಹಿಸಿದರು.

# ಶಾಂತಲಾ ನೃತ್ಯಾಲಯದ ನೃತ್ಯೋತ್ಸವ




**ನಗರದ ಕವಿಸಂನಲ್ಲಿ ಶಾಂತಲಾ ನೃತ್ಯಾಲಯದಿಂದ ನಡೆದ ನೃತ್ಯೋತ್ಸವದಲ್ಲಿ ಮಕ್ಕಳಿಂದ ಭರತನಾಟ್ಯ ಪ್ರದರ್ಶನ**

ಧಾರವಾಡ : ಭರತನಾಟ್ಯ ಬರೀ ಕಲೆಯಲ್ಲ, ಇದೊಂದು ಸಂಸ್ಕಾರ ನೀಡುವ ಕಲೆಯೂ ಆಗಿದೆ ಎಂದು ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.

ನಗರದ ಕವಿಸಂನಲ್ಲಿ ಶಾಂತಲಾ ನೃತ್ಯಾಲಯವು ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ನೃತ್ಯೋತ್ಸವ–10 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಭರತನಾಟ್ಯ ಕಲಿಯುವಂತಹ ಪ್ರತಿ ಮಗುವಿನಲ್ಲಿ ಆತ್ಮಸ್ಥೈರ್ಯ, ಏಕಾಗ್ರತೆ ಹೆಚ್ಚಾಗುತ್ತದೆ. ಭರತನಾಟ್ಯದಲ್ಲಿ ಸಾಧನೆ ಮಾಡಿದಷ್ಟು ಕಲಿಕೆಯಲ್ಲಿಯೂ ಕೂಡ ಅಷ್ಟೇ ಸಾಧನೆ ಮಾಡುತ್ತದೆ. ಇದೊಂದು ಶಾಂತಲಾ ನೃತ್ಯಾಲಯ ಮಕ್ಕಳಲ್ಲಿ ಒಳ್ಳೆಯ ಗುಣ ಕಟ್ಟುವ ಕಾರ್ಯ ಮಾಡುತ್ತಿದೆ. ಇದರಿಂದ ಸಂಸ್ಕಾರಯುತ ಸಮಾಜ ನಿರ್ಮಾಣ ಸಾಧ್ಯವಿದೆ ಎಂದ ಹಲಗತ್ತಿ, ಧಾರವಾಡ ನೃತ್ಯ ಕಲೆಯಲ್ಲಿ ವಿಶೇಷವಾಗಿ ನಾಡಿನಲ್ಲಿ ಗುರುತಿಸಿಕೊಂಡಿದ್ದು, ಈ ಸಂಸ್ಕೃತಿ, ಪರಂಪರೆ ಉಳಿದು ಸಾಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕಿ ಸೀಮಾ ಮಸೂತಿ ಮಾತನಾಡಿ, ಸಮಾಜದಲ್ಲಿ ಮೌಲ್ಯಗಳು ಕುಸಿಯುತ್ತಿರುವ ಇಂದಿನ ದಿನಮಾನದಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೇ ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡಬೇಕು. ಆ ಪುಣ್ಯ ಖಂಡಿತವಾಗಿಯೂ ನಮ್ಮ ಕಷ್ಟ ಕಾಲದಲ್ಲಿ ಶ್ರೀರಕ್ಷೆ ಆಗುತ್ತದೆ ಎಂದರು.

ನಮ್ಮ ಕಲೆ– ಸಂಸ್ಕೃತಿ ಉಳಿವಿಗಾಗಿ ಮಕ್ಕಳಿಗೆ ಸಂಸ್ಕಾರ ನೀಡುವಂತಹ ಭರತನಾಟ್ಯ ಸೇರಿದಂತೆ ಕಲೆಗಳನ್ನು ಕಲಿಯುವಂತೆ ಮಕ್ಕಳನ್ನು ಪೋಷಕರು ಪ್ರೇರೇಪಿಸಬೇಕು ಎಂದರು.

ಅತಿಥಿಯಾಗಿದ್ದ ವಿದುಷಿ ನಾಗರತ್ನಾ ಹಡಗಲಿ ಮಾತನಾಡಿ,ಕಳೆದ ಹತ್ತು ವರ್ಷಗಳಿಂದ ಸಾವಿವಾರು ಮಕ್ಕಳಿಗೆ ಭರತನಾಟ್ಯ ಕಲಿಸುವ ಮೂಲಕ ಕಲೆಗೆ ಅರ್ಪಿಸಿಕೊಂಡಿರುವ ವಿಜೇತಾ ವರ್ಣೇಕರ ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ.

ಭರತನಾಟ್ಯ ಕಲಿಯುವ ಮಕ್ಕಳಿಗೆ ಕಲೆಯೊಂದಿಗೆ ಸಂಸ್ಕಾರವೂ ಸಿಗುತ್ತದೆ. ಹೀಗಾಗಿ ಮಕ್ಕಳು ವಿಶೇಷವಾಗಿ ಭರತನಾಟ್ಯಕ್ಕೆ ಹೆಚ್ಚು ಆದ್ಯತೆ ನೀಡುವಂತಾಗಲಿ ಎಂದರು. ಶಾಂತಲಾ ನೃತ್ಯಾಲಯದ ವಿದುಷಿ ವಿಜೇತಾ ವಿನಾಯಕ ಶೇಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿ ವೆಂಕಟೇಶ ಹೊಸಮನಿ, ಹಿರಿಯ ರಂಗಕರ್ಮಿ ಡಾ.ಶಶಿಧರ ನರೇಂದ್ರ,ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ವಿನಾಯಕ ಶೇಟ್, ಕುಮಾರೇಶ್ವರ ಕಲ್ಚರಲ್ ಸೊಸೈಟಿ ಸಂಸ್ಥಾಪಕ ಬಾಳಿಕಾಯಿ ಇದ್ದರು. ಸತೀಶ ಮೂರುರು ನಿರೂಪಿಸಿದರು.

**ಗಮನ ಸೆಳೆದ ನೃತ್ಯ ರೂಪಕಗಳು**

**ಶಾಂತಲಾ ನೃತ್ಯಾಲಯದ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ವೇಳೆ ಮಕ್ಕಳಿಂದ ವಿವಿಧ ಭಕ್ತಿ ಗೀತೆಗಳಿಗೆ ಭರತನಾಟ್ಯ ನೃತ್ಯ ಪ್ರದರ್ಶನಗೊಂಡರೆ, ಮಹಾಭಾರತದ ದೃಷ್ಟಾಂತಗಳನ್ನು ನೃತ್ಯ ರೂಪಕದಲ್ಲಿ ಪ್ರತಿಬಿಂಬಗೊಂಡವು.**

**ಸಂತೋಷ ಮಹಾಲೆ ಪ್ರಸಾದನ, ಮುಕ್ತಾ ವೆರ್ಣೇಕರ ವಸ್ತ್ರಾಲಂಕಾರ ಗಮನ ಸೆಳೆಯಿತು.**

# ಭಾರತೀಯ ಯುವ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ರೋಣದಲ್ಲಿ ಯುವ ಕಾರ್ಯಕರ್ತರ ಉತ್ಸಾಹ




ರೋಣ: ಪಕ್ಷದ ಇತಿಹಾಸ ಮತ್ತು ಸಿದ್ಧಾಂತವನ್ನು ಅರಿತುಕೊಂಡಾಗ ಮಾತ್ರ ಸಂಘಟನೆಯನ್ನು ಬಲಪಡಿಸಲು ಸಾಧ್ಯ ಎಂದು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅಕ್ಷಯ ಪಾಟೀಲ ಹೇಳಿದರು. ನಗರದ ಕಾಂಗ್ರೆಸ್ ಕಾರ್ಯಾಲಯದಲ್ಲಿ ಆಯೋಜಿಸಲಾಗಿದ್ದ ಭಾರತೀಯ ಯುವ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲೇ ರೂಪುಗೊಂಡ ಕಾಂಗ್ರೆಸ್, ದೇಶಕ್ಕಾಗಿ ಹೋರಾಡಿದ ಇತಿಹಾಸ ಹೊಂದಿದೆ. ವರದಕ್ಷಿಣೆ, ಭ್ರೂಣ ಹತ್ಯೆ ತಡೆ ಹಾಗೂ ಕುಟುಂಬ ಯೋಜನೆಯಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತಲು ಯುವ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಿದೆ. ಇದು ಯಾವುದೇ ಜಾತಿ ಅಥವಾ ಧರ್ಮಕ್ಕೆ ಸೀಮಿತವಾಗದೆ, ಸಮಾಜದ ಪ್ರತಿಯೊಂದು ವರ್ಗದ ಹಾಗೂ ಬಡವರ ಪರವಾಗಿ ಗ್ರಾಮೀಣ ಪ್ರದೇಶದಿಂದ ಹಿಡಿದು ರಾಷ್ಟ್ರ ಮಟ್ಟದವರೆಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದೆ. ಯುವ ಸಮುದಾಯವು ಪಕ್ಷದ ಸಿದ್ಧಾಂತವನ್ನು ಒಪ್ಪಿ ಸೇವೆ ಸಲ್ಲಿಸಲು ಮುಂದೆ ಬರಬೇಕು ಎಂದು ಅವರು ಕರೆ ನೀಡಿದರು.

ಇದೇ ವೇಳೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅಕ್ಷಯ ಪಾಟೀಲ, ಇತ್ತೀಚೆಗೆ ನಡೆದ ನೀಟ್ ಪರೀಕ್ಷೆಯ ಅಕ್ರಮದಿಂದಾಗಿ 24 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದು ದೇಶದ ದೊಡ್ಡ ದುರಂತವಾಗಿದೆ ಎಂದರು. ಬೃಹತ್ ಭಾಷಣ ಮಾಡುವ ನಾಯಕರು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯವನ್ನು ಖಂಡಿಸಿದರು. 2012ರ ಘಟನೆಯಲ್ಲಿ ಸೋನಿಯಾ ಗಾಂಧಿಯವರು ತೋರಿದ ಧೈರ್ಯ ಮತ್ತು ನಾಯಕತ್ವವನ್ನು ಸ್ಮರಿಸಿದ ಅವರು, ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಅವರು ಜನರ ಆಶೀರ್ವಾದದಿಂದ ಈ ಮಟ್ಟಕ್ಕೆ ಬೆಳೆದಿರುವುದನ್ನು ಉಲ್ಲೇಖಿಸಿದರು.

ಪ್ರತಿ ಗ್ರಾಮದಲ್ಲೂ ಯುವ ಕಾಂಗ್ರೆಸ್ ಧ್ವನಿ ತಲುಪಿಸುವುದು, ಶಿಕ್ಷಣ, ಉದ್ಯೋಗ, ಮಹಿಳಾ ಸಬಲೀಕರಣ ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವುದು ಯುವ ಕಾಂಗ್ರೆಸ್‌ನ ಮುಖ್ಯ ಗುರಿಯಾಗಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ರೋಣ ಮತಕ್ಷೇತ್ರ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮುತ್ತುರಾಜ ನವಲಗುಂದ, ಬಸವರಾಜ ಹೊಸಳ್ಳಿ, ಸತೀಶ ಮುಧೋಳ, ಶಿವಕುಮಾರ ಬರಡ್ಡಿ, ಅಭಿಷೇಕ ನವಲಗುಂದ, ಗೋಪಿ ರಾಯನಗೌಡರ, ಯಲ್ಲಪ್ಪ ಕಿರೆಸೋರು, ಅಸ್ಲಾಂ ಕೊಪ್ಪಳ, ಸೋಮು ನಾಗರಾಜ್ ವಿನಾಯಕ್ ಜಕ್ಕನಗೌಡ್ರು ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.

# ಸಂವಿಧಾನ, ಕಾನೂನಿನ ಅಡಿಯಲ್ಲೇ ಕರ್ತವ್ಯ ನಿರ್ವಹಿಸಿ: ಎಸಿಎಫ್ ಭರತ್




ಚಿಕ್ಕನಾಯಕನಹಳ್ಳಿ: ಸಂವಿಧಾನವೇ ನಮ್ಮ ಕರ್ತವ್ಯ ನಿರ್ವಹಣೆಗೆ ಮೂಲಾಧಾರವಾಗಿದ್ದು, ಈ ನೆಲದ ಕಾನೂನು ಮತ್ತು ನಿಯಮಗಳ ಚೌಕಟ್ಟಿನಲ್ಲಿಯೇ ಪ್ರತಿಯೊಬ್ಬರೂ ಕೆಲಸ ಮಾಡಬೇಕು. ಯೂನಿಫಾರ್ಮ್ ಧರಿಸಿರುವ ನಾವು ಕಾನೂನುಬದ್ಧವಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಬದ್ಧರಾಗಿದ್ದು, ಕಾನೂನು ಮೀರಿ ಯಾವುದೇ ಕಾರ್ಯಕ್ಕೆ ಮುಂದಾಗುವುದಿಲ್ಲ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಭರತ್ ಹೇಳಿದರು.

ತೀನಂಶ್ರೀ ಭವನದಲ್ಲಿ ನಡೆದ ಅರಣ್ಯ ಕಾನೂನುಗಳ ಕುರಿತು ತರಬೇತಿ ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದ ಅವರು, ಪ್ರತಿನಿತ್ಯದ ಕರ್ತವ್ಯದಲ್ಲಿ ಕೆಲವು ಕಾನೂನು ಅಂಶಗಳು ಮರೆತುಹೋಗುವ ಸಾಧ್ಯತೆ ಇರುವುದರಿಂದ ಇಂತಹ ಕಾರ್ಯಾಗಾರಗಳು ಕಾನೂನು ಜ್ಞಾನವನ್ನು ಪುನರ್ ಅರಿವು ಮಾಡಿಕೊಳ್ಳಲು ಸಹಕಾರಿಯಾಗುತ್ತವೆ ಎಂದರು.

ಕಾರ್ಯಾಗಾರದಲ್ಲಿ ಕ್ರೈಂ ಸೀನ್ ನಿರ್ವಹಣೆ, ಸಾಕ್ಷ್ಯ ಸಂಗ್ರಹ, ಕಾನೂನು ಕ್ರಮಗಳು ಹಾಗೂ ಮನುಷ್ಯ ಪ್ರಾಣಿ ಸಂಘರ್ಷ ನಿರ್ವಹಣೆ ಕುರಿತು ತರಬೇತಿ ನೀಡಲಾಗಿದೆ. ಯೂನಿಫಾರ್ಮ್ ಕರ್ತವ್ಯದ ಜವಾಬ್ದಾರಿಯ ಸಂಕೇತವಾಗಿದ್ದು, ಸಿಬ್ಬಂದಿ ಸದಾ ಯೂನಿಫಾರ್ಮ್ ಧರಿಸಿ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು. ಯಾವುದೇ ಭೇದಭಾವವಿಲ್ಲದೆ ಪರಸ್ಪರರಿಂದ ಕಲಿಯಬೇಕು. ವಾಚರ್‌ಗಳಿಂದಲೂ ನಾವು ಕಲಿಯುವುದು ಸಾಕಷ್ಟಿದೆ. ಎಲ್ಲೆ ಕೆಲಸ ಮಾಡಿದರೂ ನಮ್ಮದೇ ಆದ ಬೆಂಚ್‌ಮಾರ್ಕ್ ಸೃಷ್ಟಿಸಿ, ಕೆಲಸದ ಮೂಲಕ ಛಾಪು ಮೂಡಿಸಬೇಕು ಎಂದರು.

ಸಂಪನ್ಮೂಲ ವ್ಯಕ್ತಿ ಚಂದ್ರಶೇಖರ್ ಮಾತನಾಡಿ, ಮೇಲಾಧಿಕಾರಿಗಳ ಸಹಕಾರವಿಲ್ಲದೆ ಯಾವುದೇ ಸಾಧನೆ ಸಾಧ್ಯವಿಲ್ಲ. ಸಿಬ್ಬಂದಿಗೆ ಕಾನೂನು ಅರಿವು ಮೂಡಿಸುವ ಉದ್ದೇಶದ ಕಾರ್ಯಾಗಾರದಲ್ಲಿ ಎಲ್ಲರೂ ಶ್ರದ್ಧೆಯಿಂದ ಭಾಗವಹಿಸಿರುವುದು ಸಂತೋಷ ತಂದಿದೆ ಎಂದರು.

# ಕದಂಬ ಸೈನ್ಯ ಬದಾಮಿಯಲ್ಲಿ ಪುಸ್ತಕ ಬಿಡುಗಡೆ ಅದ್ದೂರಿ ಸಮಾರಂಭ ಚಾಲುಕ್ಯ ಪ್ರಶಸ್ತಿ ಪ್ರಧಾನ



ಬಾದಾಮಿ : ಬದುಕನ್ನು ಬದುಕಬೇಕು. 'ಬೇರೆಯವರಿಗೂ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡಬೇಕು. ಸಮಾಜದಲ್ಲಿ ಸಹಕಾರ ತತ್ವದ ಮೂಲಕ ಬದುಕಿದರೆ ಶಾಂತಿ ಸಮಾಧಾನ ಇರುತ್ತದೆ ಎಂದು ಷ.ಬ್ರ. ಗುರುಮೂರ್ತಿ ಶಿವಾಚಾರ್ಯ ಹಾಲುಸ್ವಾಮೀಜಿಗಳು ತಿಳಿಸಿದರು.

ಬಾದಾಮಿಯಲ್ಲಿ ಬನಶಂಕರಿ ಶ್ರೀ ಗಾಯಿತ್ರಿ ಸಭಾ ಭವನದಲ್ಲಿ ಕದಂಬ ಸೈನ್ಯ ರಾಜ್ಯ ಕನ್ನಡ ಸಂಘಟನೆ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ವತಿಯಿಂದ ಭಾನುವಾರ ನಡೆದ ಚಾಲುಕ್ಯ ವರಸಿರಿ ಕೃತಿ ಲೋಕಾರ್ಪಣೆ ಮತ್ತು ಚಾಲುಕ್ಯ ಇಮ್ಮಡಿ ಪುಲಿಕೇಶಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಾದಾಮಿ ಕ್ಷೇತ್ರದ ಶಾಸಕರು ಭೀಮಸೇನ ಬಿ. ಚಿಮ್ಮನಕಟ್ಟಿ ರವರು ಮಾತನಾಡಿ ಕದಂಬ ಸೈನ್ಯ ಕನ್ನಡ ಸಂಘಟನೆಯು ಕನ್ನಡ ನಾಡು ನುಡಿ ಉಳಿಸುವ ಕಾಳಜಿಯ ಉತ್ತಮ ಕಾರ್ಯ ಮಾಡುತ್ತಿದೆ. ಸಾಹಿತ್ಯ ಪ್ರೋತ್ಸಾಹ ವಿವಿಧ ಕ್ಷೇತ್ರದ ಸಾಧಕರನ್ನು, ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸುವ ಕಾರ್ಯ ಶ್ಲಾಘನೀಯವಾದುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕದಂಬ ಸೈನ್ಯ ಕನ್ನಡ ಸಂಘಟನೆ ರಾಜ್ಯಾಧ್ಯಕ್ಷರು ಬೇಕ್ರಿ ರಮೇಶ್ ಮಾತನಾಡಿ ಕನ್ನಡಾಂಬೆಯ ಸೇವೆ ಸಲ್ಲಿಸುತ್ತ ವಿವಿಧ ಕ್ಷೇತ್ರದ ಸಾಧಕರನ್ನು ಪ್ರೋತ್ಸಾಹಿಸುವ ಕೈಂಕರ್ಯದಲ್ಲಿ ಸಾಹಿತಿಗಳು, ಕಲಾವಿದರು, ಸಮಾಜ ಸೇವಕರು, ಪ್ರಗತಿಪರ ಕೃಷಿಕರು ಮೊದಲಾಗಿ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿದೆ ಎಂದರು. ಸಾಹಿತ್ಯ ಕ್ಷೇತ್ರದಿಂದ ಕರ್ನಾಟಕ ರಾಜ್ಯ ಬರಹಗಾರರ ಸಂಘದ ರಾಜ್ಯಾಧ್ಯಕ್ಷ ಮಧುನಾಯ್ಕ ಲಂಬಾಣಿ, ಹಾಸನದ ಹಿರಿಯ ಸಾಹಿತಿ, ನಿವೃತ್ತ ಇಂಜಿನಿಯರ್ ಟಿ. ಶಂಕರಪ್ಪ ಹುಲ್ಲಂಗಾಲ (ಕಾವ್ಯನಾಮ – ರಾಜಣ್ಣ ರಾಶಿ) ಯುವ ಸಾಹಿತಿ ಕೆ.ಎನ್. ಚಿದಾನಂದರಿಗೆ ಚಾಲುಕ್ಯ ಇಮ್ಮಡಿ ಪುಲಿಕೇಶಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ವೇದಿಕೆಯಲ್ಲಿ ಹಾಸನದ ಸಾಹಿತಿ ಗೊರೂರು ಅನಂತರಾಜು

ಬಾದಾಮಿಯ ನವಗ್ರಹ ಹಿರೇಮಠದ ಷ.ಬ್ರ. ಶಿವಪೂಜಾ ಶಿವಾಚಾರ್ಯ ಮಹಾಸ್ವಾಮೀಜಿ, ಚಿತ್ರ ನಿರ್ಮಾಪಕರು ಡಾ. ಎನ್ . ನರಸಿಂಹಮೂರ್ತಿ, ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರು ಡಾ.ಸಿ.ರೇಣುಕಾಂಬ, ಚಲನಚಿತ್ರ ನಟಿ ಕು.ಸೋನಾ ಲದ್ವ ಮೊದಲಾದವರು ಇದ್ದರು. .

# ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಸಿ ನಾರನಗೌಡ ಅವಿರೋಧವಾಗಿ ಆಯ್ಕೆ



ಕೊಟ್ಟೂರು : ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ 2026 – 27 ನೇ ಸಾಲಿನ ಎಸ್‌ಡಿಎಂಸಿ ಅಧ್ಯಕ್ಷರ ಉಪಾಧ್ಯಕ್ಷರ ಆಯ್ಕೆಯ ಸಭೆ ನಡೆಸಲಾಗಿತ್ತು .

ಈ ಸಭೆಯಲ್ಲಿ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಕೊಟ್ಟೂರಿನ ಸಿ ನಾರನ ಗೌಡ ಉಪಾಧ್ಯಕ್ಷರಾಗಿ ಸಿ ನಾಗವೇಣಿ. ಅವಿರೋಧವಾಗಿ ಆಯ್ಕೆಯಾದರು. ನೂತನ ಅಧ್ಯಕ್ಷರಾದ ಸಿ ನಾರನ ಗೌಡ ರವರು ಮಾತನಾಡಿ. ಈ ಸರ್ಕಾರಿ ಬಾಲಕಿಯರ ಪ್ರೌಡ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಿ ಹಾಗೂ ಶಾಲೆಯ ಅಭಿವೃದ್ಧಿ ಕಡೆಗೆ ಗಮನ ಹರಿಸುವೆ ಎಂದರು,

# ಪ್ರಶಸ್ತಿ ನಿಮ್ಮ ಪ್ರತಿಭೆಗೆ ದೊರೆತ ಗೌರವ; ಆದರೆ ಇದೇ ನಿಮ್ಮ ಅಂತಿಮ ಗುರಿಯಾಗಬಾರದು

ಪಟ್ಟನಾಯಕನಹಳ್ಳಿ : ತಂದೆ–ತಾಯಿಗಳು ಮಕ್ಕಳಿಗಾಗಿ ಕಾಣುವ ಕನಸುಗಳನ್ನು ನನಸಾಗಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ. ಇಂದು ಪಡೆದಿರುವ ಪ್ರಶಸ್ತಿ ನಿಮ್ಮ ಪ್ರತಿಭೆಗೆ ದೊರೆತ ಗೌರವ; ಆದರೆ ಇದೇ ನಿಮ್ಮ ಅಂತಿಮ ಗುರಿಯಾಗಬಾರದು. ಇದು ಇನ್ನಷ್ಟು ಸಾಧನೆ ಮಾಡಲು ದೊರೆತ ಪ್ರೇರಣೆಯಾಗಬೇಕು ಎಂದು ಕನಕ ಗುರು ಪೀಠ ಕಾಗಿನೆಲೆ ಹೊಸದುರ್ಗ ಶಾಖಾಮಠದ ಪೀಠಾಧ್ಯಕ್ಷ ಶ್ರೀ ಈಶ್ವರಾನಂದ ಪುರಿ ಮಹಾಸ್ವಾಮಿಗಳು ಹೇಳಿದರು. ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿಯ ಶಾಂತಿನಿಕೇತನ ವಿದ್ಯಾಸಂಸ್ಥೆಯಲ್ಲಿ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.



# ಆಗಸ್ಟ್ 26ರಂದು ಪಾವಗಡದಲ್ಲಿ ಮಿಲಾದ್-ಉನ್-ನಬಿ ಜುಲೂಸ್ ಹಬ್ಬ



ಪಾವಗಡ : ಮಿಲಾದ್-ಉನ್-ನಬಿ ಹಬ್ಬವನ್ನು ಈ ವರ್ಷವೂ ಸಂಭ್ರಮ, ಶಿಸ್ತು ಹಾಗೂ ಸೌಹಾರ್ದತೆಯಿಂದ ಆಚರಿಸಲು ಪಾವಗಡ ಜಾಮಿಯಾ ಮಸೀದಿಯ ಕಮಿಟಿ ಹಾಗೂ ನೌಜವಾನ್ ಕಮಿಟಿ ವತಿಯಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಮುಸ್ಲಿಂ ಸಮುದಾಯದ ಮುಖಂಡರು ತಿಳಿಸಿದರು.

ಪಟ್ಟಣದ ಜಾಮಿಯಾ ಮಸೀದಿಯಲ್ಲಿ ನಡೆದ ಸಭೆಯ ಬಳಿಕ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಪುರಸಭಾ ಸದಸ್ಯ ಹಾಗೂ ಮುಸ್ಲಿಂ ಸಮುದಾಯದ ಮುಖಂಡ ಎಂ.ಎ.ಜಿ. ಇಮ್ರಾನ್, ಆಗಸ್ಟ್ 26ರಂದು ಬೆಳಿಗ್ಗೆ 9.30ಕ್ಕೆ ಜಾಮಿಯಾ ಮಸೀದಿಯಲ್ಲಿ ಭಕ್ತರು ಸೇರಲಿದ್ದು, 10 ಗಂಟೆಗೆ ಜುಲೂಸ್ ಮೆರವಣಿಗೆ ಆರಂಭವಾಗಲಿದೆ ಎಂದು ಹೇಳಿದರು. ಪೆನುಕೊಂಡ ಊರು ಬಾಗಿಲು, ರೊಪ್ಪ ಗ್ರಾಮಕ್ಕೆ ತೆರಳಿ ನಂತರ ಮರಳಿ ಶನಿಮಹಾತ್ಮ ಸರ್ಕಲ್ ಹಾಗೂ ಸಿರಾ ರಸ್ತೆಯ ಮಾರ್ಗವಾಗಿ ಮೆರವಣಿಗೆ ಸಾಗಲಿದೆ ಎಂದರು.

ನೌಜವಾನ್ ಕಮಿಟಿ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಸಮಾಜಮುಖಿ ಸೇವಾ ಕಾರ್ಯಗಳನ್ನು ಮುಂದುವರಿಸಲಾಗುತ್ತಿದ್ದು, ಬಡ ಯುವಕ ಯುವತಿಯರಿಗೆ ಉಚಿತ ವಿವಾಹದೊಂದಿಗೆ ಸಂಸಾರ ಜೀವನ ನಡೆಸಲು ಅಗತ್ಯವಾಗುವ ಪೀಠೋಪಕರಣಗಳನ್ನು ನೀಡಲಾಗುವುದು, ಆಶ್ರಮಗಳು ಹಾಗೂ ಆಸ್ಪತ್ರೆಗಳಿಗೆ ಹಣ್ಣು ವಿತರಣೆ ಸೇರಿದಂತೆ ವಿವಿಧ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಆಗಸ್ಟ್ 27ರಂದು ಸಂಜೆ 7 ಗಂಟೆಗೆ ಜಾಮಿಯಾ ಮಸೀದಿಯಲ್ಲಿ 12 ದಿನಗಳಿಂದ ನಡೆಯುತ್ತಿರುವ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜೀವನ ಚರಿತ್ರೆ ಪ್ರವಚನ ಸರಣಿಯ ಸಮಾರೋಪ ಕಾರ್ಯಕ್ರಮ ನಡೆಯಲಿದ್ದು, ಎಲ್ಲ ಧರ್ಮೀಯರು ಭಾಗವಹಿಸುವಂತೆ ಆಹ್ವಾನ ನೀಡಿದರು.

ಪ್ರವಾದಿ ಪೈಗಂಬರ್ ಅವರು ಬೋಧಿಸಿದ ಪ್ರೀತಿ, ಶಾಂತಿ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಖಂಡರು ಕರೆ ನೀಡಿದರು.



ನೇಸರಗಿ- ಗ್ರಾಮೀಣ ಭಾಗದಲ್ಲಿ ಸಂತೆ ಪ್ರಾರಂಭಿಸುವದರಿಂದ ನಾಗರಿಕರಿಗೆ ಅನುಕೂಲವಾಗುವುದು ಎಂದು ಇಂಚಲ ಪೂರ್ಣಾನಂದ ಮಹಾಸ್ವಾಮೀಜಿ ಹೇಳಿದರು. ಶನಿವಾರ ಸಮೀಪದ ಮುರಕೀಭಾವಿ ಗ್ರಾಮದಲ್ಲಿ ನೂತನ ಸಂತೆಗೆ ಚಾಲನೆ ನೀಡಿ ಮಾತನಾಡಿ, ಎಲ್ಲ ಗ್ರಾಮಗಳಲ್ಲಿ ಸಂತೆ ಪ್ರಾರಂಭಿಸುವದರಿಂದ ದೂರದ ಊರಿಗೆ ಹೋಗಿ ಸಂತೆ ಮಾಡುವದು ತಪ್ಪುತ್ತದೆ. ಗ್ರಾಮೀಣ ಭಾಗಗಳಲ್ಲಿ ಸಂತೆ ಪ್ರಾರಂಭಿಸುವುದರಿಂದ ಉಳಿತಾಯವಾಗುವದು ಎಂದರು.

ಈ ಸಂಧರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಈರನಗೌಡ ದೊಡ್ಡಗೌಡರ, ಗ್ರಾ. ಪಂ ಮಾಜಿ ಸದಸ್ಯರಾದ ಶಿವಾನಂದ ಪಾಟೀಲ, ಅಡಿವೆಪ್ಪ ಮೋದಗಿ, ಹಿರಿಯರಾದ ಶಿವಲಿಂಗಪ್ಪ ಶಿವಬಸವನವರ, ಗಂಗಪ್ಪ ಮಲ್ಲಾರಿ, ಈಶ್ವರ್ ಮಿಡಕನಟ್ಟಿ, ಸೋಮಪ್ಪ ಮಲ್ಲಾರಿ, ರಾಯಿನಾಯ್ಕ್ ನಾಯ್ಕರ್, ದೊಡ್ಡಗೌಡ ಪಾಟೀಲ, ಶಿವರುದ್ರಪ್ಪ ಉಡಿಕೇರಿ, ರುದ್ರಪ್ಪ ಸಾವಳಗಿ, ಬಸಯ್ಯ ಸುಂಕದ, ಅರ್ಜುನ್ ಕೊನಿನ್ನವರ, ಅಡಿವೆಪ್ಪ ಉಳವಿ, ಸಿದ್ದರಾಮ ಉಳವಿ ಉಪಸ್ಥಿತರಿದ್ದರು.

# ಕೂಡ್ಲಿಗಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಸಚಿವರಿಗೆ ದಸಂಸ ಮನವಿ



ಕೂಡ್ಲಿಗಿ: ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಕೂಡ್ಲಿಗಿ ತಾಲೂಕಿನಲ್ಲಿ ಬಿತ್ತನೆಯಾದ ಬೆಳೆಗಳು ಒಣಗುತ್ತಿದ್ದು, ಕೂಡ್ಲಿಗಿ ತಾಲೂಕು ಸೇರಿದಂತೆ ವಿಜಯನಗರ ಜಿಲ್ಲೆಯ ಇತರೆ ತಾಲೂಕುಗಳನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ಪರಿಹಾರ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ ಬಿ. ಕೃಷ್ಣಪ್ಪ ಬಣ) ಕೂಡ್ಲಿಗಿ ತಾಲೂಕು ಘಟಕದಿಂದ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿದರು. ಶುಕ್ರವಾರ ಬರ ಪೀಡಿತ ವಿಕ್ಷಣೆಗೆ ಮೊಟ್ಟ ಮೊದಲ ಬಾರಿಗೆ ಕೂಡ್ಲಿಗಿ ತಾಲೂಕಿಗೆ ಆಗಮಿಸಿದ್ದ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್. ಜಮೀರ್ ಆಹ್ಮಮದ್ ಖಾನ್ ಅವರಿಗೆ ಕೂಡ್ಲಿಗಿ ಶಾಸಕರಾದ ಡಾ. ಎನ್. ಟಿ. ಶ್ರೀನಿವಾಸ್ ಅವರ ಸಮ್ಮುಖದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮುಖಂಡರು ಮನವಿ ಸಲ್ಲಿಸಿದರು. ಕರ್ನಾಟಕ ದಸಂಸ ಜಿಲ್ಲಾ ಸಂಚಾಲಕ ಎಸ್. ದುರುಗೇಶ್ ಮಾತನಾಡಿ, ತಾಲೂಕಿನ ಜನರು ಕೈತುಂಬಾ ಸಾಲ ಶೂಲ ಮಾಡಿ ಬಿತ್ತನೆ ಮಾಡಿದ ಬೆಳೆಗಳು ಇಂದು ಮಳೆ ಕೊರತೆಯಿಂದ ಸಂಪೂರ್ಣ ನಾಶವಾಗುತ್ತಿದ್ದು, ರೈತರು ಕಂಗಾಲಾಗಿದ್ದಾರೆ.ಜಿಲ್ಲೆಯನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿ ಕೂಡಲೇ ರೈತರ ಬೆಳೆಸಾಲವನ್ನು ಮನ್ನಾ ಮಾಡಬೇಕು ಎಂದು ವಿನಂತಿಸಿದರು. ಈ ವೇಳೆ ಜಿಲ್ಲಾ ಸಂಘಟನಾ ಸಂಚಾಲಕರಾದ ಬಿ. ಟಿ. ಗುದ್ದಿ ದುರುಗೇಶ್, ಕೂಡ್ಲಿಗಿ ತಾಲೂಕು ಸಂಚಾಲಕರಾದ ಬಡೇಲಡಕು ದುರುಗೇಶ್,ಜಿಲ್ಲಾ ಸಮಿತಿ ಸದಸ್ಯ ಟಿ. ಗಂಗಾಧರ್, ಬಸವರಾಜ್, ಚೌಡೇಶ್, ತಾಲೂಕು ಸಂಚಾಲಕ ಎನ್. ಫಕೀರಪ್ಪ, ಬಸವರಾಜ್, ಕೂಡ್ಲಿಗಿ ಮಹೇಶ್, ಐಗಳಮಲ್ಲಾಪುರ ಜಿತೇಂದ್ರ, ರಮೇಶ್, ಕರಿಬಸಪ್ಪ, ಮಂಜಪ್ಪ, ಅಜಯ್, ಕಾನಾ ಮಡುಗು ಫಕೀರಪ್ಪ, ಯಲ್ಲಪ್ಪ, ಸಿ. ಎಸ್. ಪುರ ಮಂಜುನಾಥ್ ಸೇರಿದಂತೆ ಇತರರು ಇದ್ದರು.

# ಕಾಡುಗೊಲ್ಲ ಯುವ ಸಮುದಾಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಿ: ಕರೆ

ಪಾವಗಡ: ಯುವ ಸಮುದಾಯವು ಶಿಕ್ಷಣ-ಕ್ಕೆ ಪ್ರಥಮ ಆದ್ಯತೆ ನೀಡುವ ಮೂಲಕ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಫಲರಾಗಬೇಕು ಎಂದು ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಶಾಸಕರಾದ ಹೆಚ್.ವಿ. ವೆಂಕಟೇಶ್ ರವರು ಕರೆ ನೀಡಿದರು.

ಪಟ್ಟಣದ ಎಸ್.ಎಸ್.ಕೆ. ಸಮುದಾಯ ಭವನದಲ್ಲಿ ಕಾಡುಗೊಲ್ಲ ಯುವ ಸೇನೆ ಸಂಘದ ವತಿಯಿಂದ ಆಯೋಜಿಸಲಾಗಿದ್ದ 2025-26ನೇ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು ಕಳೆದ 40 ವರ್ಷಗಳಿಂದ ನನ್ನ ತಂದೆಯವರು ಹಾಗೂ ನಾನು ಯಾದವ ಜನಾಂಗದ ಸರ್ವತೋಮುಖ ಏಳಿಗೆಗೆ ನಿರಂತರವಾಗಿ ಶ್ರಮಿಸಿದ್ದೇವೆ. ಮುಂಬರುವ ದಿನಗಳಲ್ಲೂ ಸಹ ನಮ್ಮ ಸಹಕಾರ ಮತ್ತು ಬೆಂಬಲ ಕಾಡುಗೊಲ್ಲ ಸಮುದಾಯಕ್ಕೆ ಸದಾ ಇರಲಿದೆ,ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಯುವಕರು ಹೆಚ್ಚಿನ ಪರಿಶ್ರಮ ಪಡಬೇಕು. ಕಾಡುಗೊಲ್ಲ ಸಮುದಾಯದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮತ್ತು ಹಾಸ್ಟೆಲ್ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ಸರ್ಕಾರ ಹಾಗೂ ಕ್ಷೇತ್ರ ಮಟ್ಟದಲ್ಲಿ ಒದಗಿಸಲು ನಾನು ಸದಾ ಬದ್ದನಾಗಿರುತ್ತೇನೆ

ಯುವಕರು ದುರಭ್ಯಾಸಗಳಿಂದ ದೂರವಿದ್ದು, ಸಂಘಟಿತರಾಗಿ ಸಮಾಜದ ಮುಂಚೂಣಿಗೆ ಬರಬೇಕೆಂದು ಕಿವಿಮಾತು ಹೇಳಿದರು.

ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರೋತ್ಸಾಹಕ್ಕಾಗಿ ಶಾಸಕರು ತಮ್ಮ ವೈಯಕ್ತಿಕವಾಗಿ 1,50,000 ರೂಪಾಯಿಗಳ ಗೌರವ ಧನವನ್ನು ನೀಡಿ-ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕಾಡುಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಹಾರೋಗೆರೆ ಮಹೇಶ್ ರವರು ಕಾಡುಗೊಲ್ಲ ಸಮುದಾಯವು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದು, ನಿಗಮದ ವತಿಯಿಂದ ನೀಡಲಾಗುವ ವಿವಿಧ ಶೈಕ್ಷಣಿಕ ಮತ್ತು ಸ್ವಯಂ ಉದ್ಯೋಗ ಯೋಜನೆಗಳನ್ನು ವಿದ್ಯಾರ್ಥಿಗಳು ಹಾಗೂ ಯುವಜನರು ಸದುಪಯೋಗಪಡಿಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ



ಶಿಕ್ಷಣ ಸಿಕ್ಕಾಗ ಮಾತ್ರ ಸಮುದಾಯದ ನೈಜ ಅಭಿವೃದ್ಧಿ ಸಾಧ್ಯ

ಕಾಡುಗೊಲ್ಲ ಸಮುದಾಯಕ್ಕೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಜಾನಪದ ಹಿನ್ನೆಲೆಯಿದೆ. ಯುವ ಪೀಳಿಗೆಯು ನಮ್ಮ ಮೂಲ ಸಂಸ್ಕೃತಿ, ಕಲೆ ಹಾಗೂ ಮೌಲ್ಯಗಳನ್ನು ಮರೆಯದೆ, ಆಧುನಿಕ ಶಿಕ್ಷಣವನ್ನು ಪಡೆದು ಐಎಎಸ್, ಐಪಿಎಸ್ ಹಾಗೂ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಯುವಜನರು ಕೇವಲ ನೌಕರಿಯ ಭರವಸೆಯಷ್ಟೇ ಅಲ್ಲದೆ, ಸ್ವಯಂ ಉದ್ಯೋಗಿಗಳಾಗಿ ಬೆಳೆದು ಮತ್ತೊಬ್ಬರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆಯಬೇಕು. ಸಮುದಾಯದ ಪ್ರತಿಯೊಬ್ಬ ಬಡ ವಿದ್ಯಾರ್ಥಿಯ ಬೆನ್ನಲುಬಾಗಿ ನಿಲ್ಲಲು ನಿಗಮವು ಸದಾ ಸಿದ್ಧವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಾಡುಗೊಲ್ಲ ಸಮಾಜದ ಧರ್ಮಗುರುಗಳು ಹಾಗೂ ವನಕಲ್ಲು ಮಠಾಧ್ಯಕ್ಷರಾದ ಶ್ರೀ ಡಾ. ಬಸವ ರಾಮಾನಂದ ಸ್ವಾಮೀಜಿ ಯವರು ಮಾತನಾಡಿ ಸಂಸ್ಕಾರಯುತ ಶಿಕ್ಷಣ ಮತ್ತು ಸಂಘಟಿ-ತ ಹೋರಾಟದಿಂದ ಮಾತ್ರ ಯಾವುದೇ ಸಮಾಜದ ಅಭಿವೃದ್ಧಿ ಸಾಧ್ಯ. ಕಾಡುಗೊಲ್ಲ ಸಮುದಾಯವು ತನ್ನದೇ ಆದ ವೈಶಿಷ್ಟ್ಯಮಯ ಜಾನಪದ ಸಂಸ್ಕೃತಿ ಮತ್ತು ದೈವಿಕ ಪರಂಪರೆಯನ್ನು ಹೊಂದಿದೆ.

ವಿದ್ಯಾರ್ಥಿಗಳು ಅಂಕ ಗಳಿಕೆಯ ಜೊತೆಗೆ ಸನ್ಮಾರ್ಗದಲ್ಲಿ ನಡೆದು, ಹೆತ್ತ ತಂದೆ-ತಾಯಿ ಹಾಗೂ ಸಮುದಾಯಕ್ಕೆ ಒಳ್ಳೆಯ ಹೆಸರು ತರಬೇಕು ಸಮುದಾಯದ ಯುವಕರು ದುರಭ್ಯಾಸಗಳಿಗೆ ಬಲಿಯಾಗದೆ, ದುಡಿಮೆ ಮತ್ತು ಶಿಕ್ಷಣಕ್ಕೆ ತಮ್ಮ ಶಕ್ತಿಯನ್ನು ವಿನಿಯೋಗಿಸಬೇಕು. ಕಾಡುಗೊಲ್ಲ ಸಮುದಾಯದ ಪ್ರತಿಯೊಂದು ಕಟುಂಬವೂ ಶೈಕ್ಷಣಿಕವಾಗಿ ಜಾಗೃತಗೊಂಡಾಗ ಮಾತ್ರ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಲು ಸಾಧ್ಯ. ಯುವ ಸೇನೆ ಸಂಘವು ಇಂತಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಆಶೀರ್ವಚನ ನೀಡಿ-ದರು

ಮಾಜಿ ಶಾಸಕರಾದ ಕೆ.ಎಂ. ತಿಮ್ಮರಾಯಪ್ಪ ರವರು ಮಾತನಾಡಿ ಕಾಡುಗೊಲ್ಲ ಸಮುದಾಯವು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುನ್ನಲೆಗೆ ಬರಬೇಕಾದರೆ ಯುವಜನರ ಸಂಘಟನೆ ಅತ್ಯಗತ್ಯ. ಹಿಂದುಳಿದ ವರ್ಗಗಳ ಹಕ್ಕುಗಳನ್ನು ಪಡೆದುಕೊಳ್ಳಲು ನಾವೆಲ್ಲರೂ ಒಂದಾಗಿ ಶ್ರಮಿಸಬೇಕಿದೆ. ವಿದ್ಯಾರ್ಥಿಗಳು ಕೇವಲ ಅಂಕಗಳಿಗೆ ಸೀಮಿತವಾಗದೆ, ಸಮಾಜಮುಖಿ ಚಿಂತನೆಗಳನ್ನು ಬೆಳೆಸಿಕೊಂಡು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ನಾಯಕತ್ವ ಬೆಳೆಸಿಕೊಳ್ಳಬೇಕು ತಾಲ್ಲೂಕಿನಲ್ಲಿ ಕಾಡುಗೊಲ್ಲ ಸಮುದಾಯದ ಯುವಕರು ಸಂಘಟಿತರಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯ. ಶೈಕ್ಷಣಿಕವಾಗಿ ಯುವಜನತೆಗೆ ಸಿಗಬೇಕಾದ ಸೌಲಭ್ಯಗಳು ಮತ್ತು ಮೀಸಲಾತಿಯ ಸೌಲಭ್ಯಗಳನ್ನು ತಲುಪಿಸುವಲ್ಲಿ ಜನಪ್ರತಿನಿಧಿಗಳು ಹಾಗೂ ಸಮುದಾಯದ ನಾಯಕರು ಶ್ರಮಿಸಬೇಕು. ವಿದ್ಯಾರ್ಥಿಗಳು ತಮಗೆ ಸಿಕ್ಕ ಪ್ರೋತ್ಸಾಹವನ್ನು ಸದುಪಯೋಗಪಡಿಸಿಕೊಂಡು ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜದ ಋಣ ತೀರಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು

# ಬಸವ ಕೇಂದ್ರ: ದತ್ತಿ ಉಪನ್ಯಾಸ



ಹುಬ್ಬಳ್ಳಿ : ಮಾನವೀಯ ಮೌಲ್ಯಗಳ ಕುರಿತು ಇಡೀ ಜಗತ್ತಿಗೆ ಸಾರಿದ ಏಕೈಕ ಧರ್ಮ ಗುರು, ಲಿಂಗಾಯತ ಧರ್ಮ ಸಂಸ್ಥಾಪಕ, ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು ಎಂದು ನಿವೃತ್ ಕೆ.ಎ.ಎಸ್ ಅಧಿಕಾರಿ ಎಸ್ ದಿವಾಕರ್ ಅವರು ಹೇಳಿದರು. ಅವರು ಬಸವ ಕೇಂದ್ರದ ವತಿಯಿಂದ ಲಿಂಗೈಕ್ಯ ಶ್ರೀ ಬಸವಣ್ಣೆಪ್ಪ ಹಳ್ಯಾಳ ಹಾಗೂ ಲಿಂಗೈಕ್ಯ ಶ್ರೀ ಬಸವಂತಪ್ಪ ರೂಡಗಿ ಅವರ ಸ್ಮರಣಾರ್ಥ ಬ್ರೈಟ್ ಬಿಸಿನೆಸ್ ಸ್ಕೂಲ್ ಸಭಾಭವನ ದಲ್ಲಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಮನುಷ್ಯ ಸಾಧನೆ ಇಲ್ಲದೆ ಹೋಗಬಾರದು.

ಸಾಧನೆಗೆ ಬಸವ ತತ್ವ, ವಚನ ಸಾಹಿತ್ಯ ನೆರಳಾಗಿ ನಿಂತಿವೆ. ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಮೌಢ್ಯತೆ ನಿವಾರಣೆ, ಮನುಷ್ಯರಾದ ನಾವೆಲ್ಲರೂ ಒಂದು ಎಂದು ಸಾರಿದ ಧರ್ಮ ಲಿಂಗಾಯತ ಧರ್ಮ ಬೇರೆ ಬೇರೆ ಧರ್ಮಗಳಿಗಿಂತ ವಿಭಿನ್ನವಾಗಿದೆ ಎಂದರು. ಧಾರವಾಡ ಕರ್ನಾಟಕ ಕಾಲೇಜು, ತತ್ವ ಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಮೂಳಮುತ್ತಲ ಯಾದವಾಡ ಶ್ರೀ ಸಿದ್ದಾರೂಢ ಮಠದ ಪರಮ ಪೂಜ್ಯ ಡಾ ಆನಂದ್ ಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿ ಮನುಷ್ಯ ಒಳಗೂ ಹೊರಗೂ ನಿರಾಳವಾಗಿರಬೇಕು. ದಯಾ, ಕರುಣೆ, ನಿಷ್ಟೃಹ್ ಭಾವ ಹೊಂದಿರಬೇಕು. ಸದಾ ಸತ್ಸಂಗದಲ್ಲಿ ತೊಡಗಿಸಿಕೊಳ್ಳಬೇಕು. ಲಿಂಗೈಕ್ಯ ಶ್ರೀ ಬಸವಣ್ಣೆಪ್ಪ ಹಳ್ಯಾಳ ಹಾಗೂ ಲಿಂಗೈಕ್ಯ ಶ್ರೀ ಬಸವಂತಪ್ಪ ರೂಡಗಿ ಅವರು ಆದರ್ಶ ಬದುಕನ್ನು ಸಾಗಿಸಿ ಹೋಗಿದ್ದಾರೆ ಅದಕ್ಕಾಗಿ ನಾವು ಅವರನ್ನು ಸ್ಮರಿಸುತ್ತಿದ್ದೇವೆ ಎಂದರು. ಬೈಲಹೊಂಗಲ್ ತಾಲೂಕಿನ ಹೊಸೂರಿನ ಸಂಗೀತ ಕಲಾವಿಧ ವಿವೇಕ ಯಡಾಳ ಅವರ ವಚನ ಸಂಗೀತ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಬಸವ ಕೇಂದ್ರದ ಅಧ್ಯಕ್ಷ ಪ್ರೊ ಜಿ ಬಿ ಹಳ್ಯಾಳ ಅವರು ಅಧ್ಯಕ್ಷತೆ ವಹಿಸಿದ್ದರು. ದತ್ತಿದಾನಿ ಡಾ ಪ್ರಸಾದ ರೂಡಗಿ, ನಿಜಗುಣಿ ಹಳ್ಯಾಳ, ಪ್ರೊ ಎಸ್ ವಿ ಪಟ್ಟಣಶೆಟ್ಟಿ, ಕೆ ಎಸ್ ಇನಾಮತಿ ವೇದಿಕೆ ಮೇಲಿದ್ದರು. ಬಿ ಎಲ್ ಲಿಂಗಶೆಟ್ಟರ್, ಎಸ್ ವಿ ಕೊಟಗಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ ಹಾಗೂ ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಸೋಹನ ಸುರೇಶ ಹೊರಕೇರಿ, ಸುಮಂಗಲಾ ಪ್ರಸಾದ ರೂಡಗಿ, ನೀಲಗಂಗ ಹಳ್ಯಾಳ , ಪ್ರಭು ಅಂಗಡಿ, ವಿ ವಿ ಶೀರಿ, ಡಾ ಸ್ನೇಹಾ ಭೂಸನೂರ, ಡಾ ಲಿಂಗರಾಜ್ ಅಂಗಡಿ, ಎಸ್ ಪಿ ಬೆನ್ನಾಳೆ , ಸಿದ್ದಪ್ಪ ಹಳ್ಯಾಳ, ಶಿವಯೋಗಿ ಹಳ್ಯಾಳ, ಶಿರೀಶ, ಶ್ರೇಯಸ್ , ವೀರಣ್ಣ ಗೋವೇಶ್ವರ , ಬಸವಣ್ಣೆಪ್ಪ ಮಡಿವಾಳರ, ನೂರಾರು ಬಸವಾಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕಟ್ಟಡಗಳಲ್ಲ; ವ್ಯಕ್ತಿತ್ವಗಳ ನಿರ್ಮಾಣವೇ ನಿಜವಾದ ರಾಷ್ಟ್ರ ನಿರ್ಮಾಣ!

## ಡಾ. ಎಸ್.ಎ. ಪುಣೇಕರ್ ಅವರ ಶೈಕ್ಷಣಿಕ ದೂರದೃಷ್ಟಿ ಇಂದಿನ ಪೀಳಿಗೆಗೆ ದಾರಿದೀಪ: ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ

ವಿಜಯಪುರ, ಆ.9 ದೇಶ ನಿರ್ಮಾಣವೆಂದರೆ ಕೇವಲ ರಸ್ತೆ, ಕಟ್ಟಡ ಹಾಗೂ ಮೂಲಸೌಕರ್ಯಗಳ ನಿರ್ಮಾಣವಲ್ಲ. ಉತ್ತಮ ವ್ಯಕ್ತಿತ್ವದ ಜನರನ್ನು, ಜವಾಬ್ದಾರಿಯುತ ನಾಗರಿಕರನ್ನು ಹಾಗೂ ಸಮಾಜಕ್ಕೆ ಕೊಡುಗೆ ನೀಡುವ ಪೀಳಿಗೆಯನ್ನು ರೂಪಿಸುವುದೇ ನಿಜವಾದ ರಾಷ್ಟ್ರ ನಿರ್ಮಾಣ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಪ್ರತಿಪಾದಿಸಿದರು.

ನಗರದಲ್ಲಿ ಸಿಕ್ಯಾಬ್ ಅಸೋಸಿಯೇಷನ್ ಸಂಸ್ಥಾಪಕ ದಿವಂಗತ ಡಾ. ಎಸ್.ಎ. ಪುಣೇಕರ್ ಅವರ ಸ್ಮರಣಾರ್ಥ ನಡೆದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರಕ್ಕೆ ಪುಣೇಕರ್ ಅವರು ನೀಡಿದ ಕೊಡುಗೆ ಕೇವಲ ಸಂಸ್ಥೆ ನಿರ್ಮಾಣಕ್ಕೆ ಸೀಮಿತವಾಗಿಲ್ಲ. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಅವರ ಶೈಕ್ಷಣಿಕ ಸೇವೆಯೇ ಅವರ ನಿಜವಾದ ಸ್ಮಾರಕ ಎಂದರು.

1969ರಲ್ಲಿ ಸಿಕ್ಯಾಬ್ ಅಸೋಸಿಯೇಷನ್ ಸ್ಥಾಪಿಸಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿಯೇ ಇಂಗ್ಲಿಷ್ ಮಾಧ್ಯಮ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದ ಪುಣೇಕರ್ ಅವರು ಶಿಕ್ಷಣ ಕ್ಷೇತ್ರದಲ್ಲಿ ದೂರದೃಷ್ಟಿಯ ಹೆಜ್ಜೆ ಇಟ್ಟಿದ್ದರು. ಅದರ ಮುಂದುವರಿದ ಭಾಗವಾಗಿ 1974ರಲ್ಲಿಯೇ ಮಹಿಳೆಯರಿಗಾಗಿ ಪದವಿ ಕಾಲೇಜು ಆರಂಭಿಸಿ ಮಹಿಳಾ ಶಿಕ್ಷಣ ಹಾಗೂ ಸಬಲೀಕರಣಕ್ಕೆ ಆದ್ಯತೆ ನೀಡಿದ್ದರು ಎಂದು ಸ್ಮರಿಸಿದರು.

EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.